ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಕಲ್ಯಾಣ ಕಿರಣ

ಮೇ-2017 ಬೆಲೆ-20ರೂ



Digitalized by e-Sahithya Documentation Forum
Sponsored by Sarayu Foundation Trust









ಬಸವ ಜಯಂತಿಯ ಸಿಹಿ ಕ್ಷಣಗಳು

ಶ್ರೀ ಲಿಂಗಾನಂದ ಗುರುವಿಗೆ ನಮೋ

ಬಸವಂಗೆ ಶರಣಾಗಿ ಭವಿತನದಿ ದೂರಾಗಿ
ಭವದ ಬಲೆಯನ್ನೇ ಹರಿದೊಗೆದ ಶರಣರಿಗೆ
ಭಯ ಉಂಟೆ ಲೋಕದಾ॥
ನಿಜವ ನರುಹಿದ ಲಿಂಗಾನಂದ ಗುರುವೆ

"ಲಿಂಗ ಧಾರಣ ಮಾಡಿ ಜಂಗಮರ ಒಡಗೂಡಿ
ಹಂಗಹರಿದು ಸಂಸಾರದ ತನ್ನತ್ವ ತಿಳಿದಿರಲು
ಇನ್ನು ಭವದ ಬಂಗವ್ಯಾತರದಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಹುಟ್ಟು ಸಾವಿನ ನಡುವೆ ದಟ್ಟ ಕತ್ತಲೆ ಭವವು
ಮುಟ್ಟಲು ಶ್ರೇಷ್ಠ ಗುರು ಚರಣ ಭವತಾನು
ಸುಟ್ಟು ಹೊಗುವುದಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಕಾಣದ ದೇವರಿಗೆ ಕಲ್ಲಿನಲಿ ಗುಡಿಯ ಕಟ್ಟಿ
ಕಾನೆಯಾದಾನೆಂದು ಕದವಿಕ್ಕಿ ಪೂಜಿಪರು ಮಾಡುವ
ಲಿಂಗದೇವನ ವಾದ ವೇತರದಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಶರಣು ಎಂದರೆ ಕರ್ಮ ಸರಿದು ದೋರೋಡುವುದು
ಶರಣಾಗು ಒಮ್ಮೆ ಶರಣರ ಸಂಗದಲಿ ಕೈಲಾಸವನು
ಕರೆದು ತೋರುವರಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಲಿಂಗವನು ಧರಿಸದೇ ಜಂಗಮವ ಆಧರಿಸದೇ
ರುದ್ರಾಕ್ಷಿ ಭಸ್ಮವನು ಪೂಸಿಸದವರೆಲ್ಲರೂ ಲಿಂಗಾಯತರು
ಎಂತಾಗುವರು ಹೇಳಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಅಳಿದು ಅಹಂಕಾರವನು ಅರಿತು ಶ್ರೀಗುರುವನ್ನು
ತಿಳಿಮನದಿ ಲಿಂಗವನ್ನು ಪೂಜಿಸುತ್ತಿರುವಡೆ
ಮುಕ್ತಿಯ ಕದವು ತೆರೆದಂತೆ ॥
ನಿಜವ ನರುಹಿದ ಲಿಂಗಾನಂದ ಗುರುವೆ

–ಶರಣ ಮಹಾದೇವ ಪಿ. ಗುಡೇರ,
ರಾಷ್ಟ್ರೀಯ ಬಸವ ದಳ
ಗೋಕಾಕ

Digitalized by e-Sahithya Documentation Forum
Sponsored by Sarayu Foundation Trust

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-05 ಮೇ-2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಜೂನ್‌ನಲ್ಲಿ ಬರುವ ಹಬ್ಬ ಹುಣ್ಣಿಮೆ

ಬಸವ ಗಂಗೋತ್ರಿಯಲ್ಲಿ ಬಸವೋತ್ಸವ - ಜೂನ್-18

ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ - ಜೂನ್ - 30

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com

ಕೂಡಲ ಸಂಗಮದ ಬಸವ ಧರ್ಮ ಪೀಠ(ರಿ.)ದ ಆಶ್ರಯದಲ್ಲಿ

ಜಗನ್ಮಾತಾ ಅಕ್ಕಮಹಾದೇವಿ ಮಠ, ಸಾಸಲಹಟ್ಟಿಯಲ್ಲಿ

ಐದನೆಯ ಮಾತ್ರೋತ್ಸವ ಕಾರ್ಯಕ್ರಮ

2017ರ ಮೇ 28ರಂದು ಬೆಳಿಗ್ಗೆ 10-30ರಿಂದ

ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೋಕಿನ ಗೋನೂರು ಹೋಬಳಿಯಲ್ಲಿ ಇರುವ ಸಾಸಲಹಟ್ಟಿ ಗ್ರಾಮ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಖ್ಯಾತಿಯದು. ಇದಕ್ಕೆ ಕಾರಣ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಡಾ. ಮಾತೆ ಮಹಾದೇವಿಯವರು. ಲಿಂ.ಶರಣ.ಡಾ||ಎಸ್.ಆರ್. ಬಸಪ್ಪ ಮತ್ತು ಲಿಂಗೈಕ್ಯ ಶರಣೆ. ಗಂಗಮ್ಮನವರ ಮಗಳಾಗಿ ಜನ್ಮತಾಳಿದ್ದು ಸಾಸಲಹಟ್ಟಿ ಗ್ರಾಮದಲ್ಲಿ. ಪಿತ್ರಾರ್ಜಿತವಾಗಿ ಬಂದಿದ್ದ ಎರಡು ಎಕರೆ ತೋಟವನ್ನು ಪೂಜ್ಯ ಶರಣೆ. ಗಂಗಮ್ಮನವರು ಮತ್ತು ಅವರ ಮೊಮ್ಮಕ್ಕಳು ಬಸವ ಧರ್ಮ ಪೀಠಕ್ಕೆ ದಾನವಾಗಿ ಕೊಟ್ಟಿದ್ದು, ಇಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಮಠವನ್ನು ಕಟ್ಟಿಸಲಾಗಿದೆ. ಪೂಜ್ಯ ಮಾತಾಜಿಯವರು ಮಾರ್ಚ್ ತಿಂಗಳಲ್ಲಿ ಹುಟ್ಟಿದ ಕಾರಣ ಪ್ರತಿ ವರ್ಷವು ಅವರ ವರ್ಧಂತಿಯನ್ನು ಶ್ರೀ ಮಠದಲ್ಲಿ ನಡೆಸಿಕೊಂಡು ಬರಲು ಸಂಕಲ್ಪಿಸಿ 2013ರಲ್ಲಿ ಮೊದಲನೆಯ ವರ್ಧಂತಿಯನ್ನು ನಡೆಸಲಾಯಿತು. 2017ರ ಕಾರ್ಯಕ್ರಮವನ್ನು ಮೇ 28ರಂದು ಸಂಯೋಜಿಸಲಾಗಿದೆ. ದಿ.28ರಂದು ಬೆಳಿಗ್ಗೆ 10-30ರಿಂದ ಕಾರ್ಯಕ್ರಮವು ನಡೆಯಲಿದೆ. ಅನೇಕ ಗಣ್ಯರು, ರಾಜಕೀಯ ಧುರೀಣರು ಭಾಗವಹಿಸುತ್ತಲಿದ್ದಾರೆ. ಕಾರ್ಯಕ್ರಮದ ನಂತರ ಪ್ರಸಾದ(ದಾಸೋಹ)ದ ವ್ಯವಸ್ಥೆ ಇರುತ್ತದೆ. ಕಾರ್ಯಕ್ರಮಕ್ಕಾಗಿ ಶಾಮಿಯಾನ ಹಾಕಲಾಗುತ್ತದೆ.

ಆದ್ದರಿಂದ ಸಹೃದಯರು ಉದಾರವಾಗಿ ಕಾಣಿಕೆಯನ್ನು, ದವಸ-ಧಾನ್ಯಗಳನ್ನು ಕೊಡಬೇಕೆಂದು ವಿನಂತಿಸುತ್ತೇವೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಜ್ಞಾನ ಪ್ರಸಾದ - ಅನ್ನಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾಗಬೇಕೆಂದು ಕೋರುತ್ತೇವೆ.

ಶರಣೆ. ವನಜಾಕ್ಷಮ್ಮ
ವ್ಯವಸ್ಥಾಪಕರು
9741259273

ಪೂಜ್ಯ ಶ್ರೀ ಸದ್ಗುರು ಚಂದ್ರಶೇಖರ್ ಸ್ವಾಮೀಜಿ
ಚರಜಂಗಮ ಮೂರ್ತಿ, ಅಕ್ಕಮಹಾದೇವಿ ಮಠ

ಸಾಸಲಹಟ್ಟಿ ಗ್ರಾಮವು ಚಿತ್ರದುರ್ಗದಿಂದ 8.ಕಿ.ಮೀಟರ್ ದೂರದಲ್ಲಿ ಚಿತ್ರದುರ್ಗ-ತುರುವನೂರು ರಸ್ತೆಯಲ್ಲಿದೆ. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ದಾವಣಗೆರೆ ತಾಲ್ಲೋಕು ರಾಷ್ಟ್ರೀಯ ಬಸವ ದಳಗಳ ಸಹಕಾರದೊಡನೆ

ಸರ್ವರಿಗೂ ಆದರದ ಸುಸ್ವಾಗತ

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666



ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿರುವ

ಬಸವ ಗಂಗೋತ್ರಿಯಲ್ಲಿ

ಬಸವೋತ್ಸವ ಕಾರ್ಯಕ್ರಮ

ದೇವ(ಭಾನು)ವಾರ ಜೂನ್ 18 ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತ್ರಿ ಆಶ್ರಮ" ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ಸಂಸ್ಥೆಯು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ॥ ಶರಣ. ಜಿ.ಎಸ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ - ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವೋತ್ಸವ ಕಾರ್ಯಕ್ರಮ

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯಾದರೂ 2010ನೇ ಇಸ್ವಿಯಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ ದಿನಾಂಕ 18-6-2017ರಂದು ಏಳನೆಯ ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ಕ್ಕೆ ಉದ್ಘಾಟನೆ. ದಿ. 27-5-2010 ರಂದು ಜಗದ್ಗುರು ಶ್ರೀ ಚೆನ್ನಬಸವೇಶ್ವರ ಜ್ಞಾನ ಪೀಠವು ಸ್ಥಾಪನೆ ಗೊಂಡಿದ್ದು ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ ; ನಂತರ ಸಮಾರೋಪ.

ದಿ. 17-6-2017ರಿಂದ ದಿ. 19-6-2017ರ ಬೆಳಗಿನವರೆಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಬರಲಿರುವ ಶರಣ ಬಂಧುಗಳಿಗೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದದ ವ್ಯವಸ್ಥೆಯನ್ನು ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	10000ರೂ	ಹಿತೈಷಿಗಳು	1000ರೂ
ಪೋಷಕರು	5000ರೂ	ವಿಶೇಷ ಸದಸ್ಯರು	500ರೂ
ದಾನಿಗಳು	3000ರೂ	ಸಾಮಾನ್ಯ ಸದಸ್ಯರು	250ರೂ

ಬಸವೋತ್ಸವದ ಯಶಸ್ಸಿಗಾಗಿ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆಯನ್ನು ನೀಡುವುದಲ್ಲದೆ ರಸೀತಿ ಪುಸ್ತಕಗಳನ್ನು ಪಡೆದುಕೊಂಡು ದೇಣಿಗೆಯನ್ನು ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ -ಧಾನ್ಯ, ಅಕ್ಕಿ- ಬೇಳೆ, ಬೆಲ್ಲ-ಸಕ್ಕರೆ, ತರಕಾರಿ ಇತ್ಯಾದಿ ವಸ್ತುಗಳನ್ನು ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223,224,226 ರೂಟ್‌ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜೆಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಅನಾಥಾಲಯ ಮತ್ತು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ

ಒಂದನೆಯ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗಿನ ವಿದ್ಯಾಭ್ಯಾಸಕ್ಕೆ ಅನಾಥ ಬಾಲಕಿಯರಿಗೆ ಬಸವ ಗಂಗೋತ್ರಿ ಅನಾಥಾಲಯದಲ್ಲಿ ಪ್ರವೇಶಾವಕಾಶವಿದೆ. ನಿರ್ಗತಿಕ ಬಡಮಕ್ಕಳಿಗೆ, ಬಾಲಕ -ಬಾಲಕಿ ಉಭಯತರಿಗೆ, ಒಂದರಿಂದ ಏಳನೆಯ ತರಗತಿಯವರೆಗೆ ಪ್ರವೇಶಾವಕಾಶವಿದೆ.

ಸಂಪರ್ಕಿಸುವ ವಿಳಾಸ :

ಪೂಜ್ಯ ಮಾತೆ ಕಸ್ತೂರಿದೇವಿ,
ಬಸವ ಗಂಗೋತ್ರಿ ಅನಾಥಾಲಯ
ಬಸವ ಗಂಗೋತ್ರಿ, ಕುಂಬಳಗೋಡು - 560074
ಬೆಂಗಳೂರು ದಕ್ಷಿಣ ತಾಲ್ಲೋಕು. ದೂರವಾಣಿ : 9448386717/ 9845399698

Digitalized by e-Sahithya Documentation Forum
Sponsored by Sarayu Foundation Trust

ಸಂಪಾದಕೀಯ

ಸಂಭ್ರಮದ 884ನೆಯ ಜಯಂತಿ



ದಿ.29-04-2017ರಂದು ವಿಶ್ವಗುರು ಬಸವಣ್ಣನವರ 884ನೆಯ ಜಯಂತಿ ಒದಗಿ ಬಂದಿತು. ಈ ವರ್ಷದ ಜಯಂತಿ ಅತೀವ ಹರ್ಷದಿಂದ ಕೂಡಿದ್ದು, ಎಲ್ಲರಿಗೂ ಸಂಭ್ರಮ ತಂದಿದೆ.

ಮೊದಲನೆಯದಾಗಿ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಎಲ್ಲಡೆ ಜನರು ವೈಭವದಿಂದ ಬಸವ ಜಯಂತಿ ಆಚರಿಸಿದ್ದಾರೆ. ದೆಹಲಿಯ ವಿಜ್ಞಾನ ಭವನದಲ್ಲಿ ನಮ್ಮ ನೆಚ್ಚಿನ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರು ವಿಶ್ವಗುರು ಬಸವಣ್ಣನವರ, ಅಲ್ಲಮ ಪ್ರಭು, ಅಕ್ಕಮಹಾದೇವಿ ಮುಂತಾದ ಅನೇಕ ಶರಣರ 2600 ವಚನಗಳನ್ನು 23 ಭಾಷೆಗಳಲ್ಲಿ ತರ್ಜುಮೆ ಮಾಡಿದ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಅಂತೂ ವಚನ ಸಾಹಿತ್ಯ ಪ್ರಧಾನಿಯವರಿಗೆ ತಲುಪಿದ್ದು ಮತ್ತು 23 ಭಾಷೆಯ ಜನರಿಗೆ ತಲುಪಿಸಿರುವುದು ಸಂತೋಷದ ಸಂಗತಿ.

ಬಸವ ಸಮಿತಿಗೆ ಅಭಿನಂದನೆ

23 ಭಾಷೆಗಳಲ್ಲಿ 2600 ವಚನಗಳನ್ನು ಭಾಷಾಂತರ ಮಾಡಿ ಸರ್ಕಾರದಿಂದ ಅನುದಾನ ಪಡೆದು ಅವುಗಳನ್ನು ಪ್ರಕಟಿಸಿದ ಬಸವ ಸಮಿತಿಯ ಸಾಧನೆ ನಿಜಕ್ಕೂ ಅಪ್ರತಿಮ, ಅಭಿನಂದನೀಯ. ಈ ಕಾರ್ಯದ ಪ್ರೇರಕರು ಮತ್ತು ಸಾಧಕರು ಶರಣ. ಅರವಿಂದ ಜತ್ತಿಯವರು. ಅವರ ಸಂಕಲ್ಪ ದೊಡ್ಡದು. ಮೌನವಾಗಿಯೇ ಹೆಜ್ಜೆ ಇಡುತ್ತ ಅವರು ಈ ಸಾಧನೆಯಿಂದ ಶಿಖರದ ತುದಿಯನ್ನು ಏರಿರುವರೆಂದು ನಮ್ಮ ಅನಿಸಿಕೆ. ಅದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಅವರಿಗೆ ವಿಶ್ವಗುರು ಬಸವಣ್ಣನವರು ಹೆಚ್ಚಿನ ಆಯುಷ್ಯ ಆರೋಗ್ಯಭಾಗ್ಯವನ್ನು ನೀಡಲೆಂದು ಹಾರೈಸುತ್ತೇವೆ. ವಿಶ್ವದ ಅನೇಕ ಭಾಷೆಗಳಲ್ಲಿ ಸಹ ಭಾಷಾಂತರ ಮಾಡಿ ಪ್ರಕಟಿಸುವ ಆಶಯ ಹೊಂದಿದ್ದಾರೆ. ಸರ್ಕಾರದ ಅನುದಾನವೂ ಲಭ್ಯವಾಗುತ್ತಿದೆ. ಈ ಯೋಜನೆ ಪೂರ್ಣಗೊಂಡು ಜಗತ್ತಿನ ಎಲ್ಲೆಡೆ ತಲುಪಲೆಂದು ಹಾರೈಸುತ್ತೇವೆ.

ಕಿವಿಮಾತು: ಇತ್ತೀಚೆಗೆ ಪುಸ್ತಕಗಳ್ನು ಓದುವ ಅಭಿರುಚಿ ಕಡಿಮೆಯಾಗುತ್ತಿದೆ. ಅದರಲ್ಲೂ ಬೇರೆ ಭಾಷೆಯ ಪುಸ್ತಕ ಪ್ರಕಟಿಸಿದರೆ ಆ ಭಾಷೆಯ ಜನರಿಗೆ ತಲುಪಿಸುವುದು ಸಾಧ್ಯವಾಗದೆ ಅವು ಉಗ್ರಾಣದಲ್ಲಿ ಸಂಗ್ರಹವಾಗುತ್ತವೆ. ನಾವು ಕನ್ನಡದಲ್ಲಿ ಅತ್ಯಂತ ಜನಪ್ರಿಯವಾಗಿರುವ ತರಂಗಿಣಿಯನ್ನು ಮರಾಠಿ, ಹಿಂದಿ ಮತ್ತು ತಮಿಳಿನಲ್ಲಿ, ಮುದ್ರಿಸಿದೆವು. ಆದರೆ ಅವನ್ನು ಆ ಭಾಷೆಯ ಜನರಿಗೆ ಮುಟ್ಟಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಶ್ರೀ ಅರವಿಂದ ಜತ್ತಿಯವರು ಆಯಾ ರಾಜ್ಯದ ಗ್ರಂಥಾಲಯಗಳಿಗೆ ಈ ಗ್ರಂಥಗಳು ತಲುಪುವಂತೆ ಮಾಡಬೇಕು.

ಬಸವ ಸಮಿತಿಯು 50 ವರ್ಷಗಳನ್ನು ಪೂರೈಸಿದ್ದು ಸುವರ್ಣ ಮಹೋತ್ಸವ ಆಚರಿಸಿಕೊಳ್ಳತ್ತಲಿದೆ. ಈ ಸಂಸ್ಥೆಯು ಈವರೆಗೂ ಹಲವಾರು ಅಭಿನಂದನೀಯ ಕಾರ್ಯಗಳನ್ನು ಮಾಡಿದೆಯಾದರೂ ಈಗ 23 ಭಾಷೆಗಳಲ್ಲಿ ವಚನ ಗ್ರಂಥ ಪ್ರಕಟಿಸಿರುವುದು ಸಂಸ್ಥೆಯ ಸಾಧನೆಗೆ ಕಿರೀಟವಿಟ್ಟಂತಾಗಿದೆ.

ಈ ಸಂದರ್ಭದಲ್ಲಿ ಹಂತಕರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಶರಣ.ಎಂ.ಎಂ.ಕಲಬುರ್ಗಿಯವರು ಸ್ಮರಣಾರ್ಹರು. ಈ ಭಾಷಾಂತರ ಕಾರ್ಯದಲ್ಲಿ ಅವರ ಪಾತ್ರ ಹಿರಿದು. ಅವರ ಆತ್ಮಕ್ಕೆ ಶಾಂತಿ ಸಿಗಲಿ.

ಶರಣ. ಬಸಪ್ಪ ದಾನಪ್ಪ ಜತ್ತಿಯವರು ಈ ಸಂದರ್ಭದಲ್ಲಿ ಸ್ಮರಣಾರ್ಹರು. ದೂರದೃಷ್ಟಿಯಿಂದ ಬಸವ ಸಮಿತಿಯನ್ನು ಹುಟ್ಟುಹಾಕಿದರು. 50 ವರ್ಷಗಳ ಅವಧಿಯಲ್ಲಿ ಅಪೂರ್ವ ಕೆಲಸ ಮಾಡಿದೆ. ಶರಣ.ಬಿ.ಡಿ. ಜತ್ತಿಯವರ ಆಶಯವನ್ನು ಇವತ್ತು ಅವರ ಸುಪುತ್ರರಾದ ಶರಣ. ಅರವಿಂದ ಜತ್ತಿ ಪೂರೈಸಿ ಅಭಿನಂದನಾರ್ಹರಾಗಿದ್ದಾರೆ.

ಹೈದರಾಬಾದಿನಲ್ಲಿ ಬಸವ ಪುತ್ಥಳಿ

ತೆಲಂಗಾಣದ ರಾಜಧಾನಿ ಹೈದರಾಬಾದಿನ ಹುಸೇನ್ ಸಾಗರದ ದಂಡೆಯ ಮೇಲೆ ಆ ರಾಜ್ಯದ ಪ್ರಮುಖ ವ್ಯಕ್ತಿಗಳು, ಮಹಾರಾಜರು ಮುಂತಾದವರು ಪುತ್ಥಳಿಗಳನ್ನು ನಿಲ್ಲಿಸಲಾಗಿದೆ. ಕಾಕತೀಯ ವಂಶದ ರುದ್ರಮಾಂಬೆಯ ಪುತ್ಥಳಿಯೂ ಇದೆ. (ಇವನ್ನೆಲ್ಲ ನೋಡುವಾಗ ನಮ್ಮ ಗುರು ಬಸವಣ್ಣನವರ ಪುತ್ಥಳಿ ಇದ್ದರೆ ಎಷ್ಟು ಚಂದ ಅನಿಸುತ್ತಿತ್ತು. ಬೇರೆ ರಾಜ್ಯದ ಬಸವಣ್ಣನವರ ಪುತ್ಥಳಿಯನ್ನು ಇವರೇಕೆ ಮಾಡುವರು ಎಂಬ ನಿರಾಶೆ ಕಾಡುತ್ತಿತ್ತು. ಆದರೆ ಈಗ ಎಲ್ಲರಿಗೂ ಮನವರಿಕೆಯಾಗುತ್ತಿದೆ ವಿಶ್ವಗುರು ಬಸವಣ್ಣನವರು ಇಡೀ ವಿಶ್ವಕ್ಕೆ ಸಂದೇಶ ನೀಡಿದ ವಿಶ್ವವಿಭೂತಿ ಎಂದು)

ಈಗ ದಿ.29-04-2017ರಂದು ತೆಲಂಗಾಣ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಶೇಖರ್ 51 ಲಕ್ಷ ರೂ ವೆಚ್ಚದಲ್ಲಿ ಬಸವ ಪುತ್ಥಳಿಯನ್ನು ಅನಾವರಣ ಮಾಡಿದರು. ಹೈದರಾಬಾದ್ ರಾಷ್ಟ್ರೀಯ ಬಸವ ದಳಗಳ ನೂರಾರು ಸದಸ್ಯರು ಸ್ಕಾರ್ಫ್ ಹೊದ್ದು ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿ ಎಲ್ಲರ ಗಮನ ಸೆಳೆದರು. ಪುತ್ಥಳಿಯನ್ನು ಸ್ಥಾಪಿಸಿದಕ್ಕಾಗಿ ತೆಲಂಗಾಣ ಮುಖ್ಯಮಂತ್ರಿ ಶ್ರೀ ಚಂದ್ರಶೇಖರ್ ಅವರನ್ನು ಅಭಿನಂದಿಸುತ್ತೇವೆ.

ಸರ್ಕಾರಿ ಕಚೇರಿಗಳಲ್ಲಿ ಗುರು ಬಸವ ಭಾವಚಿತ್ರ

ಮಹಾರಾಷ್ಟ್ರ ಸರ್ಕಾರವು ಎಲ್ಲ ಸರ್ಕಾರಿ ಕಚೇರಿಗಳಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಹಾಕಬೇಕೆಂದು ಆದೇಶಿಸಿರುವುದು ಅತ್ಯಂತ ಆನಂದದ ಸಂಗತಿ. ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಅಭಿನಂದಿಸೋಣ.

ನಮ್ಮ ಸರ್ಕಾರ ಈಗಾಗಲೇ ಸರ್ಕಾರ ಆಫೀಸು, ಜಿಲ್ಲಾಡಳಿತ ಬಸವ ಜಯಂತಿಯನ್ನು

Digitalized by e-Sahithya Documentation Forum
Sponsored by Sarayu Foundation Trust

ಆಚರಿಸಲು ಆದೇಶಿಸಿದೆ. ಅದರಂತೆ ಜಿಲ್ಲಾಡಳಿತ ಉತ್ಸವಗಳನ್ನು ಏರ್ಪಡಿಸುತ್ತಿದೆ. ಮಹಾರಾಷ್ಟ್ರ ಸರ್ಕಾರದಂತೆ ಕರ್ನಾಟಕ ಸರ್ಕಾರವೂ ಎಂದು ಇಂಥ ಕ್ರಮವನ್ನು ಕೈಗೊಳ್ಳುವುದೋ ಎಂದು ಕಾಯುತ್ತಿದ್ದೆವು. ಈ ವರ್ಷ ಶ್ರೀ ಸಿದ್ಧರಾಮಯ್ಯನವರು ಅದೇ ರೀತಿ ಘೋಷಿಸಿದ್ದಾರೆ. ಜಿಲ್ಲಾಡಳಿತ ಸಹ ವಿಜೃಂಭಣೆಯಿಂದ ಬಸವ ಜಯಂತಿ ಆಚರಿಸಿದೆ. ಸರ್ಕಾರಿ ಕಚೇರಿಗಳಲ್ಲಿ ಮಹಾತ್ಮಗಾಂಧಿ ಮತ್ತು ಡಾ॥ ಅಂಬೇಡ್ಕರ್ ಅವರ ಭಾವಚಿತ್ರಗಳ ಜೊತೆಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರ ರಾರಾಜಿಸುವ ಕಾರ್ಯ ಆಗಬೇಕು.

ಶ್ರೀ ಸಿದ್ಧರಾಮಯ್ಯನವರ ಸರ್ಕಾರ ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿಯವ ಹೆಸರನ್ನು ಇಟ್ಟು ಬಹುದೊಡ್ಡ ಸಾಧನೆ ಮಾಡಿದೆ. ಕನ್ನಡ ನಾಡಿನ ಪ್ರಥಮ ಕವಯಿತ್ರಿ, ಸ್ತ್ರೀ ವಿಮೋಚನಾ ಚಳುವಳಿಯ ಪ್ರೇರಕರಳಾದ ಅಕ್ಕಮಹಾದೇವಿಗೆ ಸಂದ ಗೌರವವಿದೆ, ಆದ್ದರಿಂದ ಶ್ರೀ ಸಿದ್ಧರಾಮಯ್ಯನವರನ್ನು, ಇದಕ್ಕೆ ಪ್ರೇರಕರಾದ ಶ್ರೀ ಬಸವರಾಜ ರಾಯರೆಡ್ಡಿಯವರನ್ನು ಅಭಿನಂದಿಸುತ್ತೇವೆ.

ಅವರ ಆಡಳಿತಾವಧಿಯಲ್ಲಿ ಅವರು ಮಾಡಬೇಕಾದ ಇನ್ನೊಂದು ಕೆಲಸವೆಂದರೆ ಗುಲಬರ್ಗಾದ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಟ್ಟು ಘೋಷಿಸಬೇಕು. ಇದು ಲಕ್ಷಾಂತರ ಬಸವ ಭಕ್ತರ ಅಪೇಕ್ಷೆ. ಹಿಂದೊಮ್ಮೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ನಮಗೆ ಅಡ್ಡಗಾಲು ಹಾಕಿ ಅಂಬೇಡ್ಕರ್ ಹೆಸರಿಡಬೇಕೆಂದು ಚಳುವಳಿ ಮಾಡಿದರು. ಈಗ ಗುಲಬರ್ಗಾದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯವಾಗುತ್ತಿದ್ದು ಅದಕ್ಕೆ ಕೇಂದ್ರ ಸರ್ಕಾರವು ಅಂಬೇಡ್ಕರರ ಹೆಸರು ಇಟ್ಟಿದೆ. ಹೀಗಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಲು ಯಾವ ಅಡೆತಡೆಯೂ ಇಲ್ಲ. ಶ್ರೀ ಸಿದ್ಧರಾಮಯ್ಯನವರು ಈ ಮಹತ್ತರ ಕಾರ್ಯವನ್ನು ಮಾಡಬೇಕೆಂದು ಆಗ್ರಹಿಸುತ್ತೇವೆ.

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಅಕ್ಕನ ಅಮರವಾಣಿ

ಭಾಗ– 40 – ಮಾತಾಜಿ

396. ಲಿಂಗಜ್ಞಾನ ಪಡೆಯುವುದೇ ಸಾಧಕನ ಗುರಿ

ಆಕಾರವಲ್ಲದ ನಿರಾಕಾರ ಲಿಂಗವ
ಕೈಯಲ್ಲಿ ಹಿಡಿದು ಕಟ್ಟಿದೆವೆಂಬರು ಅಜ್ಞಾನಿ ಜೀವಿಗಳು
ಹರಿ ಬ್ರಹ್ಮರು ವೇದ ಪುರಾಣ ಆಗಮಂಗಳು
ಅರಸಿ ಕಾಣದ ಲಿಂಗ
ಭಕ್ತಿಗೆ ಫಲವಲ್ಲದೆ ಲಿಂಗವಿಲ್ಲ
ಕರ್ಮಕ್ಕೆ ನರಕವಲ್ಲದೆ ಲಿಂಗವಿಲ್ಲ
ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ
ವೈರಾಗ್ಯಕ್ಕೆ ಮುಕ್ತಿಯಿಲ್ಲದೆ ಲಿಂಗವಿಲ್ಲ
ಇದು ಕಾರಣ ತನ್ನ ತಾನರಿದು ತಾನಾದಡೆ
ಚೆನ್ನ ಮಲ್ಲಿಕಾರ್ಜುನದೇವರ ದೇವ ತಾನೆ ಬೇರಿಲ್ಲ

ಭಾವಾರ್ಥ– ಪರಮಾತ್ಮನು ನಿರಾಕಾರ, ನಿರ್ಗುಣ, ಇಂಥ ನಿರಾಕಾರ – ಲಿಂಗವನು ಸಾಕಾರಗೊಳಿಸಿ ಇಷ್ಟಲಿಂಗ ರೂಪದಲ್ಲಿ ಕೊಟ್ಟರು ವಿಶ್ವಗುರು ಬಸವಣ್ಣನವರು. ಆದರೆ ಬಹುಪಾಲು ಜನರು ಅಂಥ ಲಿಂಗವನ್ನು ಕಟ್ಟಿಕೊಂಡು ಹೆಮ್ಮೆ ಪಡುವರು; ಆದರೆ ಅದರ ನಿಜವಾದ ಸ್ವರೂಪವೇನು ಎಂಬ ಬಗ್ಗೆ ತಿಳಿದಿರುವುದಿಲ್ಲ. ಪರಮಾತ್ಮನ ಸ್ವರೂಪವನ್ನು ಹರಿ, ಬ್ರಹ್ಮರು ವೇದ ಪುರಾಣ ಆಗಮಂಗಳ ಮುಂತಾಗಿ ಯಾರೂ ಅರಿಯಲಿಲ್ಲ. ಭಕ್ತಿಯನ್ನು ಮಾಡಿದರೆ ಯಾವುದೊಂದಾದರೂ ಫಲವನ್ನು ಪಡೆಯುವರು. ಬರೀ ಲೌಕಿಕ ಕರ್ಮಗಳನ್ನು, ಹೋಮ ಹವನ ಮುಂತಾದ ಕ್ರಿಯೆಗಳಲ್ಲಿಯೇ ಇದ್ದರೆ ಅವರಿಗೆ ನರಕ ಸಿಕ್ಕುವುದಲ್ಲದೆ ದೇವರ ಜ್ಞಾನ ಉಂಟಾಗದು. ಕೇವಲ ಶಾಸ್ತ್ರಜ್ಞಾನ ಪಡೆದರೆ ಜನ್ಮದಿಂದ ಜನ್ಮಕ್ಕೆ ಪರಿಭ್ರಮಣ ಉಂಟಾಗುತ್ತದೆ. ವೈರಾಗ್ಯಕ್ಕೆ ಮುಕ್ತಿ ಪ್ರಾಪ್ತಿಯಾಗುವುದಲ್ಲದೆ ಲಿಂಗಜ್ಞಾನ ಉಂಟಾಗದು. ಆದ್ದರಿಂದ ತನ್ನ ತಾನರಿದು ತಾನೇ ತಾನಾದಡೆ ಚನ್ನಮಲ್ಲಿಕಾರ್ಜುನನೇ ತಾನಾಗುವನು.

397. ಭ್ರಷ್ಟರ ಪರಿ

ವಿರಕ್ತಿ ವಿರಕ್ತಿಯೆಂಬರು
ವಿರಕ್ತಿಯ ಪರಿಯೆಂತುಂಟು ಹೇಳಿರಯ್ಯಾ?
ಕಟ್ಟಿದ್ದ ಲಿಂಗವ ಕೈಯಲ್ಲಿ ಹಿಡಿದು
ಬತ್ತಲೆಯಿರ್ದಡೆ ವಿರಕ್ತನೆ?
ಉಟ್ಟುದ ತೊರೆದ ಮತ್ತೆ
ಕಟ್ಟಿದ ಲಿಂಗವ ಕೈಯಲ್ಲಿ ಹಿಡಿಯಲೇಬೇಕು.

Digitalized by e-Sahithya Documentation Forum
Sponsored by Sarayu Foundation Trust

ಉಟ್ಟುದ ತೊರೆಯದೆ ಕಟ್ಟದ ಲಿಂಗವ ಕೈಯಲ್ಲಿ ಹಿಡಿದ ಭ್ರಷ್ಟರನೇನೆಂಬೆ
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಭಾವಾರ್ಥ- ಕೆಲವರು ವಿರಕ್ತಿ ಎಂದು ಬತ್ತಲೆಯಾಗಿ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದುಕೊಂಡಿರುವರು. ಬತ್ತಲೆ ಇರುವವರಿಗೆ ಹೀಗೆ ಮಾಡಬೇಕಲ್ಲವೆ? ಆದರೆ ಮತ್ತೆ ಕೆಲವರು ಉಡು ವಸ್ತ್ರ ತೊರೆಯದೆ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ನಡೆದಾಡುವರು. ಇವರು ಭ್ರಷ್ಟರೇ ಸರಿ ಎನ್ನುತ್ತಾಳೆ ಅಕ್ಕಮಹಾದೇವಿ.

398. ವಿರಕ್ತನ ಲಕ್ಷಣ

ವಿರಕ್ತಿ ವಿರಕ್ತಿಯೆಂಬರು ವಿರಕ್ತಿಯ ಪರಿಯೆಂತುಂಟು ಹೇಳಿರಯ್ಯಾ?
ಕಟ್ಟಿದ್ದ ಲಿಂಗವ ಕೈಯಲ್ಲಿ ಹಿಡಿದಿದ್ದಡೆ ವಿರಕ್ತನೆ?
ಹುಟ್ಟು ಕೆತ್ತುವ ಡೊಂಬನಂತೆ
ಬಿಟ್ಟ ಮಂಡೆಯ ಕೇಶವನುಣ್ಣಿಸಿ ಬಣ್ಣಿಸಿ,
ಎಣ್ಣೆಯ ಗುಂಟ ಹಾಕಿದಡೆ ವಿರಕ್ತನೆ?
ಕಟ್ಟು ಹರಿದ ಪಂಜಿನಂತೆ,
ಬಿಟ್ಟಮಂಡೆಯ ಕಟ್ಟದಿರ್ದಡೆ ವಿಕ್ತನೆ?
ಹರದನಂತೆ ಹೇಸಿಯಾಗಿರ್ದಡೆ ವಿರಕ್ತನೆ?
ಮೂಗನಂತೆ ಮಾತನಾಡದಿರ್ದಡೆ ವಿರಕ್ತನೆ?
ಹೊನ್ನು ಹೆಣ್ಣು ಮಣ್ಣ ಬಿಟ್ಟು
ಅಡವಿಯಾರಣ್ಯದಲ್ಲಿರ್ದಡೆ ವಿರಕ್ತನೆ? ಅಲ್ಲ.
ವಿರಕ್ತನ ಪರಿಯೆಂತೆಂದೊಡೆ:
ಒಡಲ ಹುಡಿಗುಟ್ಟಿ, ಮೃಡನೊಳೆಡದೆರಹಿಲ್ಲದಿರಬಲ್ಲಡೆ ವಿರಕ್ತನಪ್ಪನು.
ಅಲ್ಲದಿರ್ದಡೆ ಮೈಲಾರಿ ಮಲ್ಲಿ ಗೊರವಿಯಲ್ಲವೆ
ಚೆನ್ನಮಲ್ಲಿಕಾರ್ಜುನ ದೇವರ ದೇವಾ?

ಭಾವಾರ್ಥ – ತಾವು ವಿರಕ್ತರು ಎಂದು ಹೇಳಿಕೊಳ್ಳುವರು. ಬತ್ತಲೆಯಾಗಿ ಉಟ್ಟುದೆಲ್ಲವನ್ನು ಬಿಟ್ಟು ಲಿಂಗವಸ್ತ್ರ ಸಹ ಕಟ್ಟಿಕೊಳ್ಳದೆ ಇಷ್ಟಲಿಂಗವನ್ನು ಕೈಯಲ್ಲಿ ಕೆಲವರು ಇಟ್ಟುಕೊಳ್ಳುವರು. ಇನ್ನು ಕೆಲವರು ಕೂದಲನ್ನು ಉದ್ದವಾಗಿ ಬೆಳಸಿ, ಚೆನ್ನಾಗಿ ಎಣ್ಣೆಯನ್ನು ಉಣ್ಣಿಸಿ ಮುಡಿಯನ್ನು ಕಟ್ಟುವರು. ಮತ್ತೆ ಕೆಲವರು ಉದ್ದವಾಗಿ ಕೂದಲ ಬಿಟ್ಟು ಓಡಾಡುವರು? ವ್ಯಾಪಾರಿಯಂತೆ ಕೊಳಲಾಗಿದ್ದರೆ ವಿರಕ್ತನೆ? ಮೂಕನಂತೆ ಮಾತನಾಡದಿರ್ದಡೆ ವಿರಕ್ತನೆ? ಹೊನ್ನು, ಹೆಣ್ಣು, ಮಣ್ಣು ತೊರೆದು ಅರಣ್ಯವನ್ನು ಸೇರಿದರೆ ವಿರಕ್ತರೆ ಅಲ್ಲ; ಒಡಲ ಗುಣಗಳನ್ನು ಹುಡಿಮಾಡಿ ಮೃಡನಲ್ಲಿ ತನ್ನ ಮನಸ್ಸನ್ನು ಬೆರಸಿ ಇರುವವನೇ ನಿಜ ವಿರಕ್ತ. ಅಲ್ಲದಿದ್ದರೆ ಅಂಥವರನ್ನು ಮೈಲಾರಿ, ಮಲ್ಲಿಗೊರವಿ ಎನ್ನುತ್ತೇನೆ.

399. ವಿರಕ್ತನ ಲಕ್ಷಣ

ವಿರಕ್ತಿಯೇ ಅವಿರಕ್ತಿ, ವಿರಕ್ತನೆನ್ನದಿರಣ್ಣಾ.
ನೋಟದ ಕರುಳ ಕೊಯ್ಯದನ್ನಕ್ಕರ,
ಕ್ರೀಯದ ಕರಬೋನಗಳೊಡೆಯದನ್ನಕ್ಕರ,
ಅಷ್ಟಮದಾದಿಗಳೆಂಬವ ಹೊಟ್ಟುಹುರಿಯದನ್ನಕ್ಕರ,
ಬೇಕುಬೇಡಾಯಂದು ಪರಿವ
ಸರ್ವಸಂದೇಹವ ಹೂಳದನ್ನಕ್ಕರ ವಿರಕ್ತ ವಿರಕ್ತನೆನ್ನದಿರಣ್ಣಾ,
ಶ್ರೀಶೈಲಚೆನ್ನಮಲ್ಲಿಕಾರ್ಜುನದೇವರ ದೇವನೊಬ್ಬನೆ ವಿರಕ್ತ ಕಾಣಿರಣ್ಣಾ.

ಭಾವಾರ್ಥ – ನನ್ನಲ್ಲಿ ವೈರಾಗ್ಯವಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದರಲ್ಲೇ ಅವಿರಕ್ತಿ ಇದೆ. ವಿರಕ್ತನ ನೋಟ ತೀಕ್ಷ್ಣವಾಗಿರಬೇಕು, ನಿರ್ಲಿಪ್ತತೆಯಿಂದ ಕೂಡಿರಬೇಕು. ಅವನ ನೋಟದಿಂದ ಯಾರಲ್ಲೂ ವಿಕಾರವೂ ಹುಟ್ಟಬಾರದು. ಆಚರಣೆಗಳು ಶುದ್ಧವಾಗಿರಬೇಕು. ಅವನು ಅಷ್ಟಮದಗಳನ್ನು ಸುಟ್ಟಿರಬೇಕು. ಬೇಕು-ಬೇಡ ಎಂಬ ಸಂದೇಹವನ್ನು ಹೂಳಿರಬೇಕು. ಈ ದೃಷ್ಟಿಯಿಂದ ದೇವನೊಬ್ಬನೇ ವಿರಕ್ತ ! ಅವನಲ್ಲಿ ಮಾತ್ರ ಈ ಎಲ್ಲ ಗುಣಗಳಿರುವುವು.

400. ಶೀಲವಂತರಾರು?

ಶೀಲಶೀಲವೆಂಬಿರಯ್ಯಾ,
ಶೀಲದ ನೆಲೆಯ ಬಲ್ಲಡೆ ಹೇಳಿರೋ, ಅರಿಯದಿದ್ದಡೆ ಕೇಳಿರೊ.
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ.
ಮದ ಐದನೆಯ ಭವಿ, ಮತ್ಸರ ಆರನೆಯ ಭವಿ,
ಆಮಿಷ ಏಳನೆಯ ಭವಿ.
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು
ಲಿಂಗವಿಲ್ಲದವರ ಭವಿ ಭವಿ ಎಂಬಿರಿ.
ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಗಳೆಂದು
ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ
ಹಗಲುಗಳ್ಳರ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನದೇವರ ದೇವನು?

ಭಾವಾರ್ಥ – ಕೆಲವರು ತಾವು ಶೀಲವಂತರೆಂದು ಹೇಳಿಕೊಂಡು ಬೀಗುವರು. ಮತ್ತೆ ಇವರು ಬಹಳ ಮಡಿಮಾಡುತ್ತಾರೆ. (ಲಿಂಗಾಯತರಲ್ಲಿ ಶೀಲವಂತ ಬಣಜಿಗ ಎಂಬ ಒಂದು ಒಳಪಂಗಡವಿದ್ದು, ಇವರು ಬಹಳ ಮಡಿಮಾಡುತ್ತಾರೆ) ಇನ್ನಿತರರನ್ನು

Digitalized by e-Sahithya Documentation Forum
Sponsored by Sarayu Foundation Trust

ತಿರಸ್ಕಾರದಿಂದ ನೋಡುವರು. ಇಂಥವರನ್ನು ಕುರಿತು ಅಕ್ಕಮಹಾದೇವಿ ಹೇಳುತ್ತಾರೆ. "ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ, ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ, ಮದ ಐದನೆಯ ಭವಿ, ಮತ್ಸರ ಆರನೆಯ ಭವಿ, ಆಮಿಷ ಏಳನೆಯ ಭವಿ. ಇವುಗಳನ್ನು ತಮ್ಮೊಳಗೆ ಇಟ್ಟುಕೊಂಡು ಇಷ್ಟಲಿಂಗವಿಲ್ಲದವರ ಭವಿ ಎನ್ನುವರು. ತಮ್ಮ ಅಂತರಂಗದಲ್ಲಿ ಹುದುಗಿರುವ ಲಿಂಗದೇವನ ನಿಲುವನರಿಯದೆ ಅಚ್ಚ ಪ್ರಸ್ಾದಿ, ನಿಚ್ಚ ಪ್ರಸಾದಿ, ಸಮಯ ಪ್ರಸಾದಿ ಎಂದು ಹೆಮ್ಮೆ ಪಡುವರು. ಕೆರೆ, ಭಾವಿ, ನದಿಯ ನೀರು ಮೈಲಿಗೆ ಎಂದು ನದಿಯ ದಂಡೆಯ ಮೇಲೆ ವರ್ತಿಯನ್ನು ಬಗೆದು ನೀರನ್ನು ಸಂಗ್ರಹಿಸಿ ಲಿಂಗಕ್ಕೆ ಮಜ್ಜನಕ್ಕೆರೆಯುವರು. ಇವರನ್ನು ಹಗಲುಗಳ್ಳರು ಎಂದು ಅಕ್ಕಮಹಾದೇವಿ ಹೇಳುತ್ತಾಳೆ.

401. ನಿರವಯಲ ಸ್ಥಿತಿ

ಬಸವನ ಭಕ್ತಿ ಕೊಟ್ಟಣದ ಮನೆ.
ಸಿರಿಯಾಳನ ಭಕ್ತಿ ಕಸಬುಗೇರಿ.
ಸಿಂಧುಬಲ್ಲಾಳನ ಭಕ್ತಿ ಪರದಾರದ್ರೋಹ.
ಉಳಿದಾವ ಆಟಪುಟ ಉದಾಸೀನ ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು.
ಮಣ್ಣಿನ ಮನೆಯ ಕಟ್ಟಿ
ಮಾಯಾ ಮೋಹಿನಿಯೆಂಬ ಮಹೇಂದ್ರಜಾಲದೊಳಗಾಗಿ
ಮಾಡುವ ಮಾಟ.
ಭಕ್ತನಲ್ಲಿ ಉಂಡು ಉದ್ಧಂಡವೃತ್ತಿಯಲ್ಲಿ ನಡೆವವರು ಶಿವನಲ್ಲ.
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು.
ಚೆನ್ನ ಮಲ್ಲಿಕಾರ್ಜುನದೇವರ ದೇವಾ
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ.

ಭಾವಾರ್ಥ – ಬಸವಣ್ಣನವರ ಮಹಾಮನೆ ಬತ್ತ ಕಟ್ಟುವ ಮನೆ. ಏಕೆಂದರೆ ಇಲ್ಲಿ ಸದಾ ದಾಸೋಹ ನಡೆಯುತ್ತಿರುತ್ತದೆ, ಸಿರಿಯಾಳನ ಮನೆ ಕೊಲೆಗಡುಕರ ಸ್ಥಾನ. ಏಕೆಂದರೆ ಮಗನನ್ನೇ ಕಡಿದು ಇಟ್ಟು . ಸಿಂಧುಬಲ್ಲಾಳನ ಭಕ್ತಿ ಪರಸ್ತ್ರೀಯ ಸಹವಾಸ. ಏಕೆಂದರೆ ಬಂದ ಜಂಗಮನು ಪರಸ್ತ್ರೀಯನ್ನು ಬಯಸಿದ. ದಾಸೋಹ ಮಾಡುವವರು ಅತ್ಯಂತ ದೈನ್ಯತೆಯಿಂದ ವರ್ತಿಸುವರು. ಇನ್ನು ಲೌಕಿಕರು ಮಣ್ಣಿನಿಂದ ಮನೆಯ ಕಟ್ಟಿ ಮಾಯೆಯ ಜಾಲಕ್ಕೆ ಸಿಕ್ಕಿ ವರ್ತಿಸುವರು. ಇನ್ನು ಭಕ್ತರಲ್ಲಿ ಉಂಡು ಉದ್ಧಂಡ ವೃತ್ತಿಯಲ್ಲಿ ನಡೆಯುವವರು ನಿಜ ಜಂಗಮರೇ ಅಲ್ಲ. ಇವರು ದೇವಲೋಕದಿಂದಲೂ ಹೊರಗೂ ಅನಾಚಾರಿಗಳಾಗಿ ಮರ್ತ್ಯಲೋಕಕ್ಕೂ ಹೊರಗು. ಆದರೆ ದೇವಾ ನನ್ನ ಭಕ್ತಿ ನಿನ್ನೊಳಗೆ ಐಕ್ಯವಾಗಿರುವುದರಿಂದ ನಾನು ನಿರವಯಲಾಗಿದ್ದೇನೆ.

402. ಕಲಿಗೆ ಭಯವಿಲ್ಲ

ಎಲ್ಲಿ ಹೋದಡೆ ಕಲಿಗೆ ಭಯವಿಲ್ಲ.
ಹಂದೆಗೆ ಸುಖವಿಲ್ಲ ಕಾಣಿರಣ್ಣಾ.
ಈವಂಗವಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ.
ನಿಮ್ಮ ಮುಟ್ಟಿ ಪರಧನ ಪರಸ್ತ್ರೀಯ ತೊರೆದಾತಂಗೆ
ಮುಂದೆ ಭವವಿಲ್ಲ ಚೆನ್ನ ಮಲ್ಲಿಕಾರ್ಜುನ ದೇವರ ದೇವಾ.

ಭಾವಾರ್ಥ – ಶೂರನಾದವನಿಗೆ ಎಲ್ಲಿ ಹೋದರೂ ಭಯವಿಲ್ಲ. ನಿರ್ಭಯ ಎನ್ನುವುದು ಜ್ಞಾನಿಯ ಲಕ್ಷಣ. ಹೇಡಿಗೆ ಎಂದಿಗೂ ಸುಖವಿಲ್ಲ. ಅವನು ವಿನಾಕಾರಣ ಭಯಪಡುವ ಕಾರಣ ಸದಾ ನೆಮ್ಮದಿ ಕಳೆದುಕೊಂಡು ಬದುಕುವನು. ಉದಾರವಾಗಿ ದಾನ ಮಾಡುವವನಿಗೆ ಕೆಟ್ಟ ಗುಣವಿಲ್ಲ. ಕರುಣೆಯನ್ನು ಹೊಂದಿರುವವನಿಗೆ ಪಾಪವಿಲ್ಲ. ಲಿಂಗಧಾರಣೆ ಹೊಂದಿ ಪರಧನ ಪರಸ್ತ್ರೀಯನ್ನು ತೊರೆದಾತಂಗೆ ಮುಂದಿನ ಜನ್ಮವಿಲ್ಲ.

403. ನಿರವಯಲ ಸ್ಥಿತಿ

ಸಟೆದಿಟವೆಂಬ ಎರಡುವಿಡಿದು ನುಡಿವಿದೀ ಲೋಕವೆಲ್ಲವು.
ಸಟೆದಿಟವೆಂಬ ಎರಡುವಿಡಿದು ನಡೆವನೆ ಶರಣನು?
ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದಡೆ
ಅವನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ.
ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ.
ಹುಸಿಯೆಂಬುದೆ ಹೊಲೆ, ಶಿವಭಕ್ತಂಗೆ ಹುಸಿಯೆಂಬುದುಂಟೆ ಅಯ್ಯಾ?
ಹುಸಿಯನಾಡಿ ಲಿಂಗವ ಪೂಜಿಸಿದಡೆ
ಹೊಳ್ಳಬಿತ್ತಿ ಫಲವನರಸುವಂತೆ, ಕಾಣಾ
ಚೆನ್ನಮಲ್ಲಿಕಾರ್ಜುನದೇವರ ದೇವಾ

ಭಾವಾರ್ಥ – ಸಟೆದಿಟ ಎಂಬ ಎರಡು ವಿಡಿದು ನುಡಿವುದೇ ಲೋಕವೆಲ್ಲವು. ಸಾಮಾನ್ಯವಾಗಿ ಈ ಜಗತ್ತಿನಲ್ಲಿ ಸುಳ್ಳು –ಸತ್ಯ ಎಂಬ ಎರಡನ್ನು ಹಿಡಿದು ನಡೆಯುವುದುಂಟು. ಆದರೆ ಶರಣನು ಈ ಎರಡನ್ನೂ ಹಿಡಿಯುವನೆ? ಇಲ್ಲ. ಗುರು ಲಿಂಗ ಜಂಗಮದಲ್ಲಿ ಸುಳ್ಳನ್ನು ಬಳಸಿದರೆ ಅವನು ತ್ರಿವಿಧಕ್ಕೆ ದ್ರೋಹಿ; ಅಘೋರ ನರಕವನ್ನು ಅನುಭವಿಸುವನು. ಸುಳ್ಳನ್ನು ಗುರು ಲಿಂಗ ಜಂಗಮದಲ್ಲಿ ಬಳಸಿದರೆ ಆಗ ಅವನು ಉಂಡಿದೆಲ್ಲ ಹೊಲಸು, ತಿಂಬುದೆಲ್ಲ ಮಾಂಸ, ಕುಡಿಯುವ ತೀರ್ಥ ಸಹ ಸುರೆ. ಸುಳ್ಳು ಎಂಬುದು ಹೊಲೆ; ಶಿವಭಕ್ತರು ಹುಸಿಯನ್ನು ಆಡಬಾರದು. ಸುಳ್ಳು ಹೇಳಿ ಲಿಂಗಪೂಜೆ ಮಾಡಿದರೆ ಜೊಳ್ಳನ್ನು ಬಿತ್ತಿ ಫಲವನ್ನು ಬಯಸಿದಂತೆ. ಲಿಂಗದೇವ ಮೆಚ್ಚನು.

Digitalized by e-Sahithya Documentation Forum
Sponsored by Sarayu Foundation Trust

404. ದೇವನಿಗೆ ಐದು ಮಕ್ಕಳು

ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ
ಐವರು ಮಕ್ಕಳು ಜನಿಸಿದರು.
ಒಬ್ಬ ಭಾವರೂಪ, ಒಬ್ಬ ಪ್ರಾಣರೂಪ;
ಒಬ್ಬ ಐಮುಖವಾಗಿ ಕಾಯರೂಪಾದ;
ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರಣವಾದರು.
ಐಮುಖನರಮನೆ ಸುಖವಿಲ್ಲೆಂದು
ಕೈಲಾಸವ ಹೋಗೆನು, ಮರ್ತ್ಯಕ್ಕೆ ಅಡಿ ಇಡೆನು;
ಚೆನ್ನಮಲ್ಲಿಕಾರ್ಜುನನ ದೇವ, ನೀನೆ ಸಾಕ್ಷಿ.

ಭಾವಾರ್ಥ – ಬಯಲ ಸ್ವರೂಪನಾದ ದೇವನಿಗೆ ಐದು ಮಕ್ಕಳು. ಒಂದು ಭಾವಲಿಂಗ, ಎರಡನೆಯದು ಪ್ರಾಣಲಿಂಗ, ಇನ್ನೊಂದು ಇಷ್ಟಲಿಂಗ. ಭಾವ ರೂಪವಾದುದು ಆಕಾಶ, ಪ್ರಾಣರೂಪವಾದುದು ವಾಯುತತ್ವ, ಕಾಯ ರೂಪವಾದುದು ಪೃಥ್ವಿ ತತ್ವ, ಜಲ ತತ್ವ, ಅಗ್ನಿ ತತ್ವಗಳೆರಡೂ ಉತ್ಪತ್ತಿ– ಸ್ಥಿತಿಗೆ ಕಾರಣವಾದವು. ಪಂಚಭೂತಾತ್ಮಕ ಶರೀರವು ಸುಖದ ಆಗರವಲ್ಲವೆಂದು ನಾನು ಮರ್ತ್ಯಲೋಕವನ್ನು ಇಷ್ಟಪಡೆನು; ಕೈಲಾಸಕ್ಕೂ ಆಸೆ ಪಡೆದು ದೇವಾ, ಇದಕ್ಕೆ ನೀನೇ ಸಾಕ್ಷಿ.

(ಮುಂದುವರಿಯುವುದು..)

ಬಸವ ಭಾರತಿ ಪ್ರೌಢ ಶಾಲೆಯ ಪ್ರತಿಭಾ ಕಿರಣಗಳು

ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕೂಡಲಸಂಗಮ ಬಸವ ಧರ್ಮ ಪೀಠದ ಬಸವ ಭಾರತಿ ಪ್ರೌಢ ಶಾಲೆಯ ಒಟ್ಟು ಫಲಿತಾಂಶ 85.71 ಆಗಿದ್ದು. ಪರೀಕ್ಷೆಗೆ 35 ವಿದ್ಯಾರ್ಥಿಗಳು ಹಾಜರಾಗಿದ್ದು 30 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕರಣ ಚವ್ಹಾಣ 597(95.52%) ಪ್ರಥಮ, ಈರಣ್ಣ ಕಡ್ಲಿಮಟ್ಟಿ 557 (89.12%) ದ್ವಿತೀಯ, ಅನೀಲ್ ಚವ್ಹಾಣ 525 (84%) ತೃತೀಯ, ಆನಂದ ಚಂದ್ರಶೇಖರ 504 (80.64%) ನಾಲ್ಕನೆಯ ಸ್ಥಾನ ಪಡೆದುಕೊಂಡಿದ್ದಾರೆ. ಮುದ್ದೇಬಿಹಾಳ ತಾಲ್ಲೂಕಿನ ಕೊಪ್ಪತಾಂಡದ ದೊಡ್ಡಪ್ಪ ಮತ್ತು ಕಾಶೀಬಾಯಿ ಅವರ ಪುತ್ರ ಕರಣ ಚವ್ಹಾಣ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 597 ಅಂಕ ಪಡೆದಿದ್ದಾನೆ. ತಂದೆ ದೊಡ್ಡಪ್ಪ ಅವರು ಶಿವಮೊಗ್ಗ ಜಿಲ್ಲೆಯ ಮಾಸ್ತಿಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಬಡತನದ ಕರಣ ಚವ್ಹಾಣಗೆ ಶಿಕ್ಷಣಕ್ಕೆ ತೊಂದರೆಯಾದಾಗ ಪೂಜ್ಯ ಮಹದೇಶ್ವರ ಸ್ವಾಮೀಜಿ ಕೂಡಲ ಸಂಗಮದಲ್ಲಿ ಆಶ್ರಯ ಕೊಟ್ಟು ಬಸವ ಭಾರತಿ ಪ್ರೌಢ ಶಾಲೆಯಲ್ಲಿ ಅಧ್ಯಯನ ಮಾಡಲು ಅವಕಾಶ ಕೊಟ್ಟರು. ನಿರಂತರ ಅಧ್ಯಯನದ ಫಲವಾಗಿ ಕೂಡಲಸಂಗಮ ಪರೀಕ್ಷಾ ಕೇಂದ್ರಕ್ಕೆ 597 ಅಂಕ ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದಿದ್ದಾನೆ.

ಹುನಗುಂದ ತಾಲ್ಲೂಕಿನ ಸುರಳಿಕಲ್ಲದಲ್ಲಿ ಉಪಜೀವನಕ್ಕಾಗಿ ಸಣ್ಣ ಪ್ರಮಾಣದಲ್ಲಿ ಹೋಟೆಲ್ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದ ಶಂಕ್ರಪ್ಪ, ಭಾರತಿ ದಂಪತಿಗಳ ಮಗ ಈರಣ್ಣ ಕಡ್ಲಿಮಟ್ಟಿ ಎರಡನೆಯ ಸ್ಥಾನ ಪಡೆದುಕೊಂಡಿದ್ದಾನೆ.

ಕರಣ ಹಸಿಗೆ

– ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ
ಅಲ್ಲಮಗಿರಿ, ಮಹಾರಾಷ್ಟ್ರ

ಪರಮಾತ್ಮನ ಸ್ವರೂಪ

"ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗವು, ಆದಿ ಮಧ್ಯಾಂತರವಿಲ್ಲದ ಸ್ವತಂತ್ರಲಿಂಗವು, ನಿತ್ಯ ನಿರ್ಮಲ ಲಿಂಗವು, ಅಯೋನಿಸಂಭವನಯ್ಯಾ ನಮ್ಮ ಲಿಂಗದೇವರು" ಈ ವಚನ ಧರ್ಮ ಗುರು ಬಸವಣ್ಣನವರದು. GOD ಬೇರೆ *goods* ಬೇರೆ *G=Generating, O=Organizing, D=Destructing.* ಯಾವುದರಲ್ಲಿ ಈ ಜಗತ್ತು ಹೊರ ಹೊಮ್ಮಿದೆಯೋ, ಯಾವುದರಲ್ಲಿ ಈ ಜಗತ್ತು ಲೀಲೆಯಾಡುತ್ತದೆಯೋ, ಯಾವುದರಲ್ಲಿ ಈ ಜಗತ್ತು ಕೊನೆಯಲ್ಲಿ ಲಯವಾಗುತ್ತದೆಯೋ ಅದಕ್ಕೆ ದೇವರು ಅನ್ನುತ್ತಾರೆ, ಪರಮಾತ್ಮ ಅನ್ನುತ್ತಾರೆ. ದೇವರು ಅಮೂಲ್ಯನು ಬೆಲೆ ಕಟ್ಟಲಾರದಷ್ಟು ಆತನ ನಿಲುವು. ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡ ದೇವತೆಗಳನ್ನು ನೋಡಿದಾಗ ದರ್ಶನ ಪಡೆಯಲು ಅಷ್ಟು ಹಣ ಇಷ್ಟು ಹಣ ಕೊಡಬೇಕು, ಅಭಿಷೇಕ ಮಾಡಿದರೆ ಇಷ್ಟು, ತಲೆ ಬೋಳಿಸಿಕೊಂಡು ಹುಂಡಿಗೆ ಹಾಕಿ ದರ್ಶನ ಪಡೆಯುವುದು. ಅಲಂಕಾರ ಮಾಡಲಿಕ್ಕೆ, ಬುತ್ತಿಪೂಜೆ, ಬೆಣ್ಣೆ ಮೆತ್ತುವುದು, ಬೆಳ್ಳಿ ಬಂಗಾರ ಒಡವೆ ವಸ್ತ್ರ ಧರಿಸುವುದು, ಮುಂಜಾನೆ ಹುಡುಗ – ಹುಡಿಗೆಯ ಹಾಗೆ, ಮಧ್ಯಾಹ್ನ ಹರೆಯದವರ (ಪ್ರಾಯ) ಹಾಗೆ, ರಾತ್ರಿ ಮುದುಕ– ಮುದುಕಿಯರ ಹಾಗೆ ದಿನನಿತ್ಯ ಶಯನೋತ್ಸವ ಮಾಡುವುದು. ಅಕಸ್ಮಾತ್ ರಾತ್ರಿ ಕಳ್ಳರು ಬಂದು ಬೆಳ್ಳಿ ಬಂಗಾರ ಹುಂಡಿ ಹಣವನ್ನು ಕದಿಯಲು ಬಂದಾಗ, ಕದ್ದು ಹೋಗುವಾಗ ಆ ದೇವತೆ ಸುಮ್ಮನೆ ಇರುವುದು. ಇದು ಏನು ತೋರಿಸುತ್ತದೆ ಅಂದರೆ ಜನರನ್ನು ಮೋಸ ಮಾಡುವುದು, ಶೋಷಣೆ, ಜಾತೀಯತೆ, ಮೂಢನಂಬಿಕೆ, ಭಯ ಹುಟ್ಟಿಸುವುದು, ಕುರಿಕೋಳಿ ಕೋಣದಂತಹ ಪ್ರಾಣಿ ಬಲಿ, ನರಬಲಿ ಕೊಡುವುದು, ಹೋಮಹವನ, ಅಶ್ವಮೇಧಯಾಗ, ನವಗ್ರಹ ಪೂಜೆ, ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿ ಕಳಸಾರೋಹನ ಮಾಡುವುದು, ಹಲವು ದೇವತೋಪಾಸನೆ ಮಾಡುವುದು, ಇದೆಲ್ಲವನ್ನು ಕಂಡುಕೇಳಿ ಮನನೊಂದು ಸರಿಸಮಾನತೆ ಇಲ್ಲದ ಧರ್ಮಾಚರಣೆ ಒಪ್ಪದ ಬಾಲ ಬಸವರಸರು ಮನೆ ಬಿಟ್ಟು ಬಂದು ಕೂಡಲ ಸಂಗಮ ಪಾಶುಪತಶೈವ ಜಾತವೇದ ಮುನಿಗಳ ಗುರುಕುಲ (ಯೂನಿವರ್ಸಿಟಿ)ದಲ್ಲಿ ಗುರುಗಳ ಆದೇಶದಂತೆ ಸಂಗಮನಾಥನ ಪೂಜೆಮಾಡಿ ಭಕ್ತಿಯೋಗಿಯಾಗಿ, ಯೋಗಾಸನ ಪ್ರಾಣಾಯಾಮಗಳನ್ನು ಮಾಡಿ ಪತಂಜಲಿ ಯೋಗವನ್ನು, ವೇದಶಾಸ್ತ್ರಗಳನ್ನು ಅಧ್ಯಯಿನಿಸಿ ಜ್ಞಾನ ಯೋಗಿಯಾಗಿ (ಪುರಾಣ, ಆಗಮ, ಗೀತೆ) 21 ವರ್ಷಗಳ ವರೆಗೆ ಬ್ರಹ್ಮಚಾರಿಯಾಗಿದ್ದು 64 ವಿದ್ಯೆಗಳನ್ನು ಕರಗತ ಮಾಡಿಕೊಂಡು ಚಿಂತನಮಾಡುತ್ತಿದ್ದರು. ದೇವರು ನಿರಾಕಾರ, ನಿರಂಜನ, ನಿರವಯವ, ನಿರ್ಗುಣ, ಪರಂಜ್ಯೋತಿ ಸ್ವರೂಪನಾಗಿದ್ದಾನೆಂದು, ಅವನನ್ನು ಮಾನವ, ಪ್ರಾಣಿ, ಪಶು, ಪಕ್ಷಿ, ಕ್ರಿಮಿ

Digitalized by e-Sahithya Documentation Forum
Sponsored by Sarayu Foundation Trust

ಕೀಟಕ, ಗಿಡ, ಮರ ಆಕಾರದಲ್ಲಿ ಸ್ಥಾಪಿಸದೆ, ಪೂಜೆಮಾಡದೆ, ಅವನ ಸ್ವರೂಪದಂತೆಯೆ ಒಂದು ಗೋಲಾಕಾರದ ವೈಜ್ಞಾನಿಕತೆಯ, ವೈಚಾರಿಕತೆಯ, ಆಧ್ಯಾತ್ಮಿಕತೆಯ ಆತ್ಮನ ಪ್ರತೀಕವಾಗಿ ಇಷ್ಟಲಿಂಗವನ್ನು ತಯಾರಿಸಿ ಅದರಲ್ಲಿ ಪರಮಾತ್ಮನ ಚಿತ್ಕಳೆ ತುಂಬಿ ಪೂಜೆಗೆ, ಯೋಗಕ್ಕೆ ಅನುಕೂಲವಾಗಲೆಂದು ಸರ್ವರಿಗೂ (ಮಾನವಕುಲಕ್ಕೆ) ಇಷ್ಟಲಿಂಗವೆಂಬ ಅದ್ಭುತ ಪರಿಕಲ್ಪನೆಯ ದೇವರ ಕುರುಹನ್ನು ದಯಪಾಲಿಸಿದರು. ಇದಕ್ಕೆ ಪೂರಕವಾಗಿ ದೇವನ ಸಾಕ್ಷಾತ್ಕಾರ ಹೊಂದಿದರು.

ಈ ಇಷ್ಟಲಿಂಗ *Mobil God, Personal God,* **Security God** ತರಹ ಇದೆ. ಈ ಶರೀರವನ್ನು *Moving Temple, Talking God* ರೀತಿಯಲ್ಲಿ ಪರಿವರ್ತನ ಗೊಳಿಸಿದರು.ಇದಕ್ಕೆ ಪೂರಕವಾಗಿ, "ಉಳ್ಳವರು ಶಿವಾಲಯವ ಮಾಡುವವರು ನಾನೇನು ಮಾಡಲಿ ಬಡವನಯ್ಯಾ, ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನಕಳಸವಯ್ಯಾ, ಲಿಂಗದೇವಾ ಕೇಳಯ್ಯಾ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಗುರು ಬಸವಣ್ಣನವರು, ಶರೀರದ, ದೇವರ, ಆತ್ಮನ ಮಹತಿಯನ್ನು ಜಗತ್ತಿನ ಮಾನವರಿಗೆಲ್ಲ ಅರುಹಿದ್ದಾರೆ.

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ, ಅಗಮ್ಯ ಅಗೋಚರ ಅಪ್ರತಿಮ ಅಪ್ರಮಾಣ ಲಿಂಗದೇವಯ್ಯಾ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ" ಎಂದು ಪರಮಾತ್ಮನ ಇರುವನ್ನು ಹಾಗೂ ಬೃಹದಾಕಾರದ ಅವನ ಸ್ವರೂಪವನ್ನು ಚುಳುಕಾಗಿಸಿ (ಚಿಕ್ಕಪ್ರಮಾಣದಲ್ಲಿ) ಪೂಜೆಗೆ, ತ್ರಾಟಕ ಯೋಗಕ್ಕೆ, ಧ್ಯಾನಕ್ಕೆ ಯೋಗ್ಯವಾಗಲೆಂದು ಕರುಣಿಸಿದ್ದಾರೆ. ಇಷ್ಟಲಿಂಗೋಪಾಸನೆಯಲ್ಲಿ ತ್ರಾಟಕಯೋಗದ ಮುಖಾಂತರ ಕುಂಡಲಿನಿ ಜಾಗೃತಿಯೋಗ ಅಡಕವಾಗಿದೆ. ಜಾಗತಿಕ ಧರ್ಮಗಳಲ್ಲಿ ಇರಲಾರದಂತಹ ಪರಿಪೂರ್ಣ ಧರ್ಮವನ್ನು, ಅನುಸಂಧಾನವನ್ನು ಅಳವಡಿಸಿದ್ದಾರೆ..

ಪರಮಾತ್ಮನನ್ನು ಪೂಜಿಸಿ, ಪ್ರಾರ್ಥಿಸಿ, ಧ್ಯಾನಿಸಿ 33+33+33+1 ಮಾರ್ಕ ಭಕ್ತಿ, ಶ್ರದ್ಧೆ, ನಿಷ್ಠೆಯಿಂದ, ಶರಣಾಗತಿಭಾವದಿಂದ ಆರಾಧಿಸಿದರೆ 100ಕ್ಕೆ 100 ಮಾರ್ಕ್ಸ ಪಡೆಯುವವರು ಲಿಂಗಾಯತ ಧರ್ಮೀಯರನ್ನು ಬಿಟ್ಟರೆ ಇನ್ನಾರಿಗೂ ಈ ಭಾಗ್ಯವಿಲ್ಲ. ಒಂದೇ ಜನ್ಮದಲ್ಲಿ ಮುಕ್ತಿಯನ್ನು, ಕಾಯಲಿಂಗೈಕ್ಯ, ಭಾವಲಿಂಗೈಕ್ಯವನ್ನು ಪಡೆಯಲಿಕ್ಕೆ ಸರಳ ಉಪಾಯವನ್ನು ಅನುಗ್ರಹಿಸಿದ್ದಾರೆ. ಗುರು ಬಸವಣ್ಣನವರಿಗೆ ಎಷ್ಟು ಕೋಟಿ ಕೋಟಿ ನಮನಗಳನ್ನು, ಕೃತಜ್ಞತೆಯನ್ನು ಸಲ್ಲಿಸಿದರೂ, ಅರ್ಪಿಸಿದರೂ ಕಡಿಮೆಯೇ ಸರಿ. ಇಂತಹ ಸಾವಯವ – ಸಾಕಾರ ಗುರುವರರನ್ನು ಪಡೆದ ನಾವು ಧನ್ಯಾತ್ಮರು, ಪುಣ್ಯಾತ್ಮರು. ಇಂತಹ ಒಂದು ಕೊಡುಗೆ ದೊರೆತಿರುವುದು ಜನ್ಮಜನ್ಮದಲ್ಲಿ ಮಾಡಿದ ನಿಷ್ಕಾಮ ಪುಣ್ಯದ ಫಲ. ಮಾನವ ಜನ್ಮದಲ್ಲಿ ಹುಟ್ಟಿ ಬಂದುದು ಸಾರ್ಥಕ.

ಪ್ರಣವದ ವಿಕಾಸ

ಪ್ರಣವ ಅಂದರೆ ಓಂಕಾರ. ಓಂಕಾರ ಅಂದರೆ ದೇವರು. ಓಂಕಾರದಲ್ಲಿ ಮೂರು

ಅಕ್ಷರಗಳಿವೆ. ಅ ಕಾರ, ಉ ಕಾರ, ಮ ಕಾರ. ಅಕಾರವು ಜಗತ್ತಿನ ಉತ್ಪತ್ತಿಯನ್ನು ಉಕಾರವು ಜಗತ್ತಿನ ಸ್ಥಿತಿಯನ್ನು, ಮಕಾರವು ಜಗತ್ತಿನ ಲಯವನ್ನು ಸೂಚಿಸುತ್ತದೆ. ಬ್ರಹ್ಮ-ವಿಷ್ಣು-ಮಹೇಶ್ವರ ಎಂಬ ಮೂರು ಶಕ್ತಿಗಳನ್ನು ಸೂಚಿಸುತ್ತದೆ. ಪರಮಾತ್ಮನ, ಓಂಕಾರದ ಕಾರ್ಯ ಮುಖಗಳು, ಮೂರು ದೇವತೆಗಳಲ್ಲ. ಹುಟ್ಟಿಸುವಾಗ (ಜಗತ್ತನ್ನು) ಬ್ರಹ್ಮನೆಂದರು, ಪಾಲನೆ ಮಾಡುವಾಗ ವಿಷ್ಣುವೆಂದರು, ಲಯ ಮಾಡುವಾಗ ಮಹೇಶ್ವರನೆಂದರು. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿತ್ರಯಗಳು. ಸ್ಥೂಲ, ಸೂಕ್ಷ್ಮ ಕಾರಣ ಶರೀರತ್ರಯಗಳು, ಜಾಗ್ರ ಸ್ವಪ್ನ, ಸುಷುಪ್ತಿ ಅವಸ್ಥಾತ್ರಯಗಳು. ವಿಶ್ವ ತೈಜಸ ಪ್ರಾಜ್ಞರೆಂಬ ಜೀವತ್ರಯಗಳು. ಕಾರ್ಮಿಕಮಲ, ಮಾಯಾಮಲ, ಆಣವಮಲತ್ರಯಗಳು. ಹಸ್ತಮಸ್ತಕ ಸಂಯೋಗದಿಂದ, ದೃಷ್ಟಿ ಮಾತ್ರದಿಂದ, ಸಂಕಲ್ಪಮಾತ್ರದಿಂದ ಗುರುವು ಶಿಷ್ಯನನ್ನು ಉದ್ಧರಿಸುವನು. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಪ್ರತಿಷ್ಠಾಪಿಸುವನು. ಕ್ರಿಯಾ, ಮಂತ್ರ, ಭಾವದೀಕ್ಷೆ ಕೊಡುವನು. ಸಂಚಿತ, ಪ್ರಾರಬ್ಧ, ಆಗಾಮಿ ಕರ್ಮತ್ರಯಗಳನ್ನು ಕಳೆಯುವನು. ತನು ಮನ ಪ್ರಾಣಗಳನ್ನು ದೈವೀಕರಿಸುವುದು ಅಕ್ಷರತ್ರಯದ ಮಹಿಮೆ. ಬಸವ ಎಂಬ ಮೂರಕ್ಷರವೂ ಸಹಿತ ಅ ಉ ಮ ದ ಸಾಂಕೇತಿಕ, ಓಂಕಾರ ಸ್ವರೂಪ. ಮೂರುಎಳೆ ಭಸಿತವನ್ನು ಧರಿಸುವುದೂ ಸಹಿತ ಇದರ ಸಾಂಕೇತಿಕ.

ಭಕ್ತಿ ಜ್ಞಾನ ವೈರಾಗ್ಯಗಳನ್ನು ಸೂಚಿಸುವಂತಹದ್ದು. ಅರ್ಚನೆ ಅರ್ಪಣೆ ಅನುಭಾವಗಳನ್ನು, ಕಾಯಕ, ದಾಸೋಹ, ಪ್ರಸಾದಗಳನ್ನು ಸೂಚಿಸುವಂತಹದ್ದು. ತನುದಾಸೋಹ , ಮನ ದಾಸೋಹ,ಧನ (ಭಾವ)ದಾಸೋಹಗಳನ್ನು ಸೂಚಿಸುವಂತಹದ್ದು.

ಪ್ರತಿಯೊಬ್ಬ ಮಾನವನ ಹೃದಯದಲ್ಲಿ ಅನಾಹತನಾದವಿದೆ. ಬಡಿದ ಮೇಲೆ ನಮಗೆ ಕೇಳಿಸುವಂತಹದು ಆಹತನಾದ. ಬಡಿಯಲಾರದೇ ಕೇಳಿಸುವಂತಹದು ಅನಾಹತನಾದ. ಅದುವೇ ಓಂಕಾರ – ಪ್ರಣವನಾದ. 24 ಗಂಟೆ ನಮ್ಮ ಒಳಗೇ ಇದ್ದು ಉಲಿಯುತ್ತಿರುತ್ತದೆ ಪ್ರಣವನಾದ. ಆದರೆ ಹೊರಗಿನ ಶಬ್ದವನ್ನು ಪ್ರತಿಯೊಬ್ಬರೂ ಕೇಳುತ್ತಾರೆ. ಆದರೆ ಒಳಗೆ ಇರುವ – ಕೇಳಿಸುವ ಓಂಕಾರನಾದವನ್ನು ಭಕ್ತಿಯಿಂದ, ಏಕಾಗ್ರತೆಯಿಂದ ಆಲಿಸುತ್ತ ಹೋದರೆ ಏನಾಗುತ್ತದೆ ಅನ್ನುವುದನ್ನು ಕೇಳಿ, ಒಂದ ಕೋಳಿ ಕೂಗುತದೆ ಇರುಳು ಹಗಲೆನ್ನದೆ, ಅದನರಿಯರಲ್ಲಾ ಮರ್ತ್ಯದ ಗಣಂಗಳು. ಅರಿದಡೆ ಭವ ಬಂಧವಿಲ್ಲ, ಮರೆದಡೆ ಜನನ ಮರಣಕಳವಿಲ್ಲ, ಕಪಿಲಸಿದ್ಧಮಲ್ಲಿಕಾರ್ಜುನಾ "ಎಂದು ಲಿಂಗಾಂಗ ಯೋಗಿ ಶ್ರೀ ಸಿದ್ದರಾಮೇಶ್ವರರು ಓಂಕಾರ ನಾದದ ಮಹತಿಯನ್ನು ತುಂಬಾ ಮಾರ್ಮಿಕವಾಗಿ, ಅಷ್ಟೇ ಹೃದಯಂಗಮವಾಗಿ ವೇಧಿಸಿಕೊಳ್ಳಲು ಮಾರ್ಗದರ್ಶನ ಮಾಡುತ್ತಿದ್ದಾರೆ.

ಇನ್ನೊಂದು ಕಡೆ "ಗುದ ಗುಹ್ಯ ನಾಭಿ ಕಮಲದಿಂದ ಮೇಲೆ ಷಡಂಗುಲವನೊತ್ತಲು, ಕಣ್ಣಿಲ್ಲದೆ ಕಾಣಬಹುದು ಲಿಂಗ ಪ್ರಕಾಶವ, ಕಿವಿಯಿಲ್ಲದೆ ಕೇಳಬಹುದು ಮಹಾನಾದ ಸುನಾದವ । ಇಂತು ಕಂಡು ಕೇಳಿ ನಂಬದಿದ್ದಡೆ ಮಕ್ಕಳಾಟಿಕೆ ತಪ್ಪದು ಗುಹೇಶ್ವರಾ" ಎಂದು ಶೂನ್ಯ ಪೀಠಾಧೀಶ ಯೋಮಕಾಯಸಿದ್ದ ಅಲ್ಲಮಪ್ರಭುದೇವರು ಉಪದೇಶಿಸಿದ್ದಾರೆ.

(ಮುಂದುವರೆಯುವುದು..)

Digitalized by e-Sahithya Documentation Forum
Sponsored by Sarayu Foundation Trust

ಬದುಕಿನ ಮಾರ್ಗ

– ಪೂಜ್ಯ ಶ್ರೀ ಬಸವಪ್ರಭು ಸ್ವಾಮೀಜಿ

ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದೊಮ್ಮೆ ಜರಿಯದಿರಾ!
ನೀನೊಮ್ಮೆ ಒಡಲುಗೊಂಡು ನೋಡಾ, ರಾಮನಾಥ!

ದೇವರು ಬದುಕನ್ನು ಕೊಟ್ಟ; ಮಹಾತ್ಮರು ಬದುಕಲು ಕಲಿಸಿಕೊಟ್ಟವರು. ಬದುಕಿನ ಅರ್ಥ ಹಲವಾರು ಬಗೆ. ಆಯ್ಕೆ ಮಾತ್ರ ನಮ್ಮದು. ಮಾನವನು ಹುಟ್ಟಿ ಬಂದಿದ್ದು. ಕೇವಲ ಉಣ್ಣಲಿಕ್ಕಾಗಿ ಮಾತ್ರವಲ್ಲ ಬದುಕು ಸುಂದರವಾಗಿ ಸಾಗಿಸಲು.ಆದ್ದರಿಂದ ಒಂದು ಕಡೆ ಜ್ಞಾನಿಗಳು ನುಡಿಯುತ್ತಾರೆ.

* ಉಣ್ಣಲಿಕ್ಕಾಗಿ ಬದುಕುವುದು ಬೇರೆ
* ಬದುಕುವುದಕ್ಕಾಗಿ ಉಣ್ಣುವುದು ಬೇರೆ
* ಪರಮಾತ್ಮನಿಗಾಗಿ ಬದುಕುವುದು ಬೇರೆ

ಮುಂದುವರೆದು ಅವರು ಹೇಳುವಂತೆ ಉಣ್ಣಲಿಕ್ಕೆ ಬದುಕುವವನು ರಾಕ್ಷಸ. ಬದುಕುವುದಕ್ಕಾಗಿ ಉಣ್ಣುವವನು ಮಾನವ. ಪರಮಾತ್ಮನಿಗಾಗಿ ಬದುಕುವವನು ದೇವ ಮಾನವ. ಈ ಬಗ್ಗೆ ಸರ್ವಜ್ಞನು ಹೇಳದೆ ಬಿಟ್ಟಿಲ್ಲ.

ಒಂದೊತ್ತು ಉಂಡವನು ಯೋಗಿ
ಎರಡೊತ್ತು ಉಂಡವನು ಭೋಗಿ
ಮೂರೊತ್ತು ಉಂಡವನು ರೋಗಿ
ನಾಲ್ಕೊತ್ತು ಉಂಡವನು ಹೊತ್ತುಕೊಂಡು ಹೋಗಿ

ಈ ಮೇಲಿನ ಮಾತುಗಳನ್ನು ನಾವು ನೋಡಿದಾಗ ಜೇಡರ ದಾಸಿಮಯ್ಯನ ವಚನ ಇಲ್ಲಿ ದ್ವಂದ್ವ ಸ್ಥಿತಿಯಲ್ಲಿ ಕಂಡು ಬರುತ್ತದೆ. ಮಾನವನ ಐಹಿಕ ಬದುಕಿಗೆ ಬೇಕಾದ ಮೊದಲನೆ ಸ್ಥಿತಿ ಊಟ ಈ ಒಡಲಿಗೆ (ಹಸಿವಿಗೆ) ಊಟ ವೊಂದಾದರೆ. ಸಾಕು ದೇವರೆ ನೀನೆ ಒಡಲುಗೊಂಡು ಈ ಜಗತ್ತಿನ ಮೇಲೆ ಬಂದು ನೋಡು, ಆಗ ನಿನಗೆ ಅರಿವಾಗುತ್ತದೆ ಎಂಬುದು ಗಮನಾರ್ಹ. ಊಟ ಎಂದಾಕ್ಷಣ ಕೇವಲ ದೈಹಿಕ ಹೊಟ್ಟೆ ತುಂಬಿಸಿಕೊಳ್ಳುವದು ಎಂಬರ್ಥ ಸಾಮಾನ್ಯವಾಗಿ ನಮ್ಮ ವಿಚಾರಕ್ಕೆ ದುತ್ತೆಂದು ಬಂದು ನಿಲ್ಲುತ್ತದೆ. ಆದರೆ ಜೇಡರ ದಾಸಿಮಯ್ಯನ ಪ್ರಕಾರ ಬೇರೆಯೇ ಅರ್ಥವನ್ನು ಕಲ್ಪಿಸಿಯೂ ನೋಡಬಹುದು.

"ಒಡಲುಗೊಂಡವ ಹಸಿವ" ಒಂದು ಹೊಟ್ಟೆ ತುಂಬಿಸಿಕೊಳ್ಳಲು, ಕೆಲವರು ತಮ್ಮ ಬುದ್ಧಿ ಶಕ್ತಿಯನ್ನು (ಜ್ಞಾನ ಶಕ್ತಿ) ಕ್ರಿಯಾಶಕ್ತಿಯನ್ನು, ಇಚ್ಛಾಶಕ್ತಿಯನ್ನು ಬಳಸಿಕೊಳ್ಳ ಬೇಕಾಗುತ್ತದೆ. ಪಂಡಿತನು ಹೊಟ್ಟೆ ತುಂಬಿಸಿಕೊಳ್ಳಲು ಜ್ಞಾನಶಕ್ತಿಯನ್ನು ವ್ಯಯ ಮಾಡಿ, ರಾಜರನ್ನು ಹೊಗಳಲು ಮತ್ತು ಸಾಹಿತ್ಯ ಬರೆಯಲು ಅದರ ಉಪಯೋಗದಿಂದ ತನ್ನ

ಹೊಟ್ಟೆಗಾಗಿ ಬೇಕಾದ ಸಾಮಾಗ್ರಿಗಳನ್ನು ತರಲು ಇನಾಮುಗಳನ್ನು ಪಡೆಯುತ್ತಾನೆ.

ಈ ಜ್ಞಾನಶಕ್ತಿ ಅಷ್ಟು ಸುಲಭವಾಗಿ ಸಿದ್ದಿಸಲು ಸಾಧ್ಯವಿಲ್ಲ, ಅಲ್ಲಿ ಅವನ ಪ್ರತಿಭೆ ವ್ಯುತ್ಪತ್ತಿ ಅಭ್ಯಾಸದ ಬಲದಿಂದ ಮತ್ತು ಸದೃಢ ದೇಹ, ಸ್ವಾಸ್ಥ್ಯ ಹಾಗೂ ಅನುಭಾವಿಗಳ ಸಂಘಬೇಕು. ಈ ಎಲ್ಲಾ ಲಕ್ಷಣಗಳಿಂದ ಅವನು ಜ್ಞಾನಿಯಾಗಲು ಯೋಗ್ಯನಾದವನು ಮತ್ತು ಸಹೃದಯರನ್ನು ಹೋಲಿಸಿಕೊಳ್ಳುವ ಸಾಹಿತ್ಯ ಬರೆಯಲು ಸಾಧ್ಯವಾಗುವುದು. ಅಂದಾಗ ಜ್ಞಾನಿಯಾದವನು ಈ ಎಲ್ಲಾ ಕೆಲಸ ಕಾರ್ಯದಿಂದ ತನ್ನ ಉದರ ಹೊರೆಕೊಂಬುವವನು ಎಂದಾಯಿತು.

ಕ್ರಿಯಾ ಶಕ್ತಿ :– ನಿರಂತರ ಕ್ರಿಯಾತ್ಮಕ ಚಟುವಟಿಕೆಯಿಂದ ಹಿಡಿದ ಕೆಲಸ ಯಾವುದೇ ಆಗಲಿ ಆ ಸಹಾಯದಿಂದ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳವವನು. ಉದಾಹರಣೆಗಾಗಿ ನಾವು ನೋಡುವುದಾದರೆ, ಒಬ್ಬ ವ್ಯಾಪಾರಿ ಊರಿಂದ ಊರಿಗೆ ಹೋಗಿ ಅಂದಂದಿನ ವ್ಯಾಪಾರ ಮುಗಿಸಿದರೆ ತಾನೇ ಅವನಿಗೆ ಸಂಪತ್ತು. ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಒಂದು ಯಾವುದೇ ವಸ್ತು ಮಾರ್ಕೇಟಿಗೆ ಬಂತೆಂದರೆ, ಅಂತದ್ದೆ ಮತ್ತು ಅದಕ್ಕಿಂತ ಭಿನ್ನವಾದ ರೀತಿಯಲ್ಲಿ ತಯಾರು ಮಾಡಿ ಮೊದಲಿನ ಭೇಟಿಗಿಂತ ಅಗ್ಗವಾಗಿಸಿ ಬಿಡುತ್ತಾನೆ. ಈ ರೀತಿ ಪೈಪೋಟಿ ನಡೆಸುವುದೆಂದರೆ ಸಾಮಾನ್ಯವೇ ತನ್ನ ನಿರಂತರ ಕ್ರಿಯಾಶಕ್ತಿಯನ್ನು ವ್ಯಯ ಮಾಡಬೇಕಾಗುತ್ತದೆ. ಪ್ರತಿ ಫಲ ಬಂತು ಸರಿ, ಇಲ್ಲವಾದರೆ ಉಪವಾಸವೇ ಗತಿ ಅಂದ ಹಾಗೆ ಇಲ್ಲಿ ತನ್ನ ಹೊಟ್ಟೆಗಾಗಿ, ಹೊಟ್ಟೆ ತುಂಬಿಸಿಕೊಳ್ಳಲು ಕ್ರಿಯಾಶಕ್ತಿ ಮುಖ್ಯವೆನಿಸುತ್ತದೆ.

ಇಚ್ಛಾಶಕ್ತಿ : ಇದು ಮಾನವನಿಗೆ ಬಹಳ ಮುಖ್ಯವಾಗುತ್ತದೆ. ಜ್ಞಾನಶಕ್ತಿ ಕ್ರಿಯಾಶಕ್ತಿಗಳು ನಿಂತಿರುವವೇ ಈ ಇಚ್ಛಾಶಕ್ತಿಯಿಂದ. ಅಂದರೆ ಒಬ್ಬ ವ್ಯಕ್ತಿ ಏನೋ ಒಂದು ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾದರೆ, ಮೊದಲು ಅವನು ಇಷ್ಟಪಡುವ ಮಾನಸಿಕ ಸ್ಥಿತಿಯೇ ಇಚ್ಛಾಶಕ್ತಿ ಇಂದು ನಾವು ಎಷ್ಟೋ ಜನರನ್ನು ನೋಡುತ್ತೇವೆ. ಸೋಮಾರಿಗಳಾಗುತ್ತಾರೆ. ಅವರು ಊಟ ಮಾಡಲು ಸೋಮಾರಿತನ ಮಾಡುತ್ತಾರೆ. ಊಟದ ತಟ್ಟೆ ತೊಳೆಯಲು ಸೋಮಾರಿತನ ಇನ್ನೂ ಕುಂತರೂ ನಿಂತರೂ ಸೋಮಾರಿತನವೇ ಪ್ರದರ್ಶಿಸುತ್ತಾರೆ.

ಅಕ್ಬರನ ಆಸ್ಥಾನದಲ್ಲಿ ಒಂದು ಕಥೆ ಬರುತ್ತದೆ. ಅಕ್ಬರ ಬೀರಬಲ್ಲ ಮತ್ತು ಮುಂತಾದ ಪಂಡಿತರನ್ನು ಉದ್ದೇಶಿಸಿ ನಿಮ್ಮಲ್ಲಿ ಯಾರು ಹೆಚ್ಚು ಸೋಮಾರಿಗಳು ಎಂದು ಕೇಳಿದಾಗ, ಎಲ್ಲಾರೂ ರಾಜನಿಂದ ಇನಾಮು ತೆಗೆದುಕೊಳ್ಳಲು ನಾ ಹೆಚ್ಚು ಸೋಮಾರಿ, ನಾ ಹೆಚ್ಚು ಸೋಮಾರಿ ಎಂದು ಕೂಗಾಡುತ್ತಾರೆ. ಆದರೆ ಅಲ್ಲಿಯೇ ಕುಳಿತ ಬೀರಬಲ್ಲನನ್ನು ಕುರಿತು ಅಕ್ಬರ ನೀನು ಸುಮ್ಮನೆ ಕುಳಿತಿದ್ದೀಯಲ್ಲಾ, ಸೋಮಾರಿಯಲ್ಲವೇ? ಎಂದಾಕ್ಷಣ ಬೀರಬಲ್ಲ ಪ್ರತಿಯಾಗಿ ನಾನು ಸೋಮಾರಿಯೇ ಆದರೆ ಹಾಗೆಲ್ಲಾ ಕೂಗಿಕೊಳ್ಳಲು ಬೇಜಾರು ಎಂದು ಮೈ ಮುರಿದನಂತೆ. ಆಗ ರಾಜನಿಂದ ಅವನೇ ಪ್ರಶಸ್ತಿ ಗಿಟ್ಟಿಸಿಕೊಂಡ ಎಂದು ತಿಳಿದು

Digitalized by e-Sahithya Documentation Forum
Sponsored by Sarayu Foundation Trust

ಬರುತ್ತದೆ. ಯಾರು ಸೋಮಾರಿಗಳು? ಸಕಲೇಶ ಮಾದರಸರು ತಮ್ಮದೊಂದು ವಚನದಲ್ಲಿ ಹೇಳುತ್ತಾರೆ,

ಕಾಯಕಾರದ ಮೈಸೋಂಬತನದಿಂದ
ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ
ಉಡಲು ಸೀರೆ ಗಳಿಸಲಾರದೆ, ಕಚ್ಚುಟುವ ಕಟ್ಟಿಕೊಂಡಿಪ್ಪರಯ್ಯಾ.
ಮೀಯಲು ಎಣ್ಣೆ ಗಳಿಸಲಾರದೆ ಮಂಡೆ ಬೋಳಾಗಿಪ್ಪರಯ್ಯಾ
ದಿಟದಿಂದ ಬಿಡಿಸಲರಿಯದೆ ಸಂಸಾರದ
ಶಠೆಯನವಧರಿಸಿಕೊಂಡಿಪ್ಪವರಿಗೆ
ನಾನಂಜುವೆನಯ್ಯಾ ಸಕಲೇಶ್ವರ !

ಈ ರೀತಿಯಾಗಿ ಇರುವವರು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಆದರೆ ನಾನು ಇಲ್ಲಿ ಹೇಳಹೊರಟಿರುವುದು ಇಚ್ಚಾಶಕ್ತಿ ಯಾರಲ್ಲಿ ಇರುವುದಿಲ್ಲವೋ, ಅವರು ಸೋಮಾರಿ ಅಂದರೆ ಹೊಟ್ಟೆ ತುಂಬಿಸಿಕೊಳ್ಳಲು. ಈ ಇಚ್ಚಾಶಕ್ತಿ ಮೂಲ ಕಾರಣವೆಂಬುದು ನಮ್ಮ ಅರಿವಿಗೆ ಬರಬೇಕು.

ಇಷ್ಟೆಲ್ಲಾ ಕಾರಣಗಳಿಂದ ಜೇಡರ ದಾಸಿಮಯ್ಯಾನವರು ಇಲ್ಲಿ ದೇವರಿಗೆ ನೀನು ಒಡಲುಗೊಂಡು ನೋಡು ನಿನಗೆ ಈ ಮಾನವನ ಬದುಕು ಹೇಗೆ ಎಂದು ಗೊತ್ತಾಗುತ್ತದೆ, ಎಂದು ಹೇಳಿರಬೇಕೆಂದು ಭಾವಿಸಬಹುದು. ಒಡಲುಗೊಂಡವನು" ಈ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿಯಿಂದ ಕಾರ್ಯಮಾಡಬೇಕಾದರೆ. ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಸುಳ್ಳನ್ನು ನುಡಿಯುತ್ತಾನೆ. ಅದು ನುಡಿಯಲೇ ಬೇಕು, ಆ ಸುಳ್ಳು ಹಲವಾರು ಬಗೆಯಿಂದ ಕೂಡಿರಬಹುದು. ಸತ್ಯಕ್ಕಾಗಿ, ಕಲ್ಯಾಣಕ್ಕಾಗಿ ಮಾನವನ ಸರ್ವಾಂಗ ಅಭಿವೃದ್ಧಿಗಾಗಿ ಕೆಲವು ಕಡೆ ಸುಳ್ಳನ್ನು ಹೇಳಬಹುದು. ಆದರೆ ದೇವರನ್ನು ನೀನು ಜರಿಯಬೇಡ. ನೀನು ಮಾನವನಾಗಿ ಬಂದರೆ ಈ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಿಯಾ ಎಂದು ಹೇಳುತ್ತಾ, ಜೇಡರ ದಾಸಿಮಯ್ಯನವರ ಮಾನವನ ಬದುಕಿನ ರೀತಿಯನ್ನು ಅವನು ಕೈಗೊಳ್ಳುವ ಕ್ರಮವನ್ನು ವಿಡಂಬಿಸಿದ್ದಾರೆ, ವಿಶ್ಲೇಷಿಸಿದ್ದಾರೆ. ವಿನ: ಬೇರೆ ಯಾವುದೇ ಕಾರಣಕ್ಕೆ ಅಲ್ಲ. ಹೀಗೆ ಅವರು ಅನೇಕ ವಚನದಲ್ಲಿ ದೇವನನ್ನು ಕುರಿತು ಮಾನವನ ಬಗ್ಗೆ ಅನುಕಂಪತಾಳಿ ನ್ಯಾಯಕೊಡಿಸಲು ಮುಂದಾಗುತ್ತಾರೆ. ಹೀಗೆ ಮಹಾತ್ಮರು ಈ ನಶ್ವರ ಬದುಕು ಸಾರ್ಥಕ ವಾಗುವ ರೀತಿಯನ್ನು ತಮ್ಮ ಅನೇಕ ವಚನಗಳಲ್ಲಿ ಸಾರಿ ಸಾರಿ ಹೇಳಿದ್ದಾರೆ. ಅಂದರೆ 12ನೇ ಶತಮಾನದ ಮಹಾನ್ ಪ್ರವಾದಿ ಸಮಸ್ತ ಮನುಕುಲದ ಹಿತಚಿಂತಕ ಬಸವಣ್ಣನವರು ಸಮಗ್ರ ಮಾನವನ ಬದುಕನ್ನೆ ವಿಶ್ಲೇಷಿಸಿ ಅವನಿಗೆ "ಅರಿದೊಡೆ ಶರಣ ಮರೆದೊಡೆ ಮಾನವ" ಎಂಬ ಎಚ್ಚರಿಕೆ ಗಂಟೆಯನ್ನು ಭಾರಿಸಿ ಬದುಕುವೆಯಾದರೆ ಈ ನಶ್ವರ ಜೀವನ ಅರಿತು ಬದುಕು ಯಾವುದು ಶಾಶ್ವತವಲ್ಲ. ಶಾಶ್ವತವಾಗಿರುವುದು ನಾವು ಇಲ್ಲಿ ಬಿಟ್ಟು

ಹೋಗುವ ಒಳ್ಳೆ ಕಾರ್ಯಗಳು ಎಂಬುದನ್ನು ತಿಳಿಹೇಳುತ್ತಾ ಹೊಸ ಬದುಕಿನ ಮಾರ್ಗವನ್ನು ಕಟ್ಟಿಕೊಡುತ್ತಾರೆ.

"ನಡೆಯ ಕಲಿಸಿದ ಬಸವಾ,
ನುಡಿಯ ಕಲಿಸಿದ ಬಸವಾ
ಉಡಲು ಕಲಿಸಿದ ಬಸವಾ,
ಉಣಲು ಕಲಿಸಿದ ಬಸವಾ"

ಬದುಕನ್ನು ಕೊಟ್ಟರೆ, ಧರ್ಮಪಿತ ಗುರು ಬಸವಣ್ಣನವರು ಬದುಕಲು ಕಲಿಸಿದರು. ಅಂತೆಯೇ ಜನಪದವು ಬದುಕನ್ನು ಕಟ್ಟಿಕೊಟ್ಟ ಧರ್ಮಪಿತರ ಬಗ್ಗೆ ಅಪಾರ ಅಭಿಮಾನವನ್ನಿಟ್ಟು ತಮ್ಮ ಅನುಭಾವ ನುಡಿಯನ್ನು ಜನಪದ ಸಾಲಿನಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಗುಬ್ಬಿ ಹೆರವರ ಮನೆ, ತನ್ನ ಮನೆ ಎಂಬಂತೆ
ಸಿರಿ ಕನಕ ಧನ ವನಿತೆಯರು ನನ್ನವರು
ತನ್ನವರು ಎಂದು ಹೋರಿ ಹೋರಿ ಸಾಯುತ್ತಿದೆ
ಈ ಜೀವ ಲಿಂಗದೇವನೆ
ಜಗ ಸರ್ವಕರ್ತನು ಎಂಬುದ ಮರೆತು.

ಮಾನವನು ಬುದುಕು ಸಿರಿ ಸಂಪತ್ತಿನಿಂದ ತುಂಬಲಿ, ತುಳುಕಲಿ. ಆದರೆ ಆ ಸಿರಿ ಸಂಪತ್ತು ಬಂದ ಉದ್ದೇಶವನ್ನು ಮರೆಯುತ್ತಿರುವುದು ದುರಂತ.ಇಂದಿನ ದಿನ ಮಾನದಲ್ಲಿ ನಾವು ನೋಡುತ್ತಿದ್ದೇವೆ. "ಮೀಸೆ ಬಂದವರಿಗೆ ದೇಶವೇ ಕಾಣುವುದಿಲ್ಲ" ಎಂಬಂತೆ ವರ್ತಿಸುತ್ತಿರುತ್ತಾರೆ. ಯಾವ ವ್ಯಕ್ತಿ ಸುಪ್ರಭಾತದಲ್ಲಿ ಎದ್ದು, ತನ್ನ ಇಷ್ಟಲಿಂಗವನ್ನು ಮನಸಾರೆ ಪೂಜಿಸಿ, ಪ್ರಾರ್ಥಿಸಿ, ಅರ್ಚಿಸಿ, ಪ್ರಸಾದ ಸ್ವೀಕರಿಸುವನೋ ಅಂತಹವನೆಗೆ ದಿನವಿಡೀ ಯಾವುದೇ ಅಪಘಾತಗಳು ಕಷ್ಟ ನಷ್ಟಗಳು ಸಂಭ್ರವಿಸವುದಿಲ್ಲವೆಂದು ಗುರು ಬಸವಣ್ಣನವರು ಅಭಯಹಸ್ತ ನೀಡುತ್ತಾರೆ. ಈ ರೀತಿಯಾದ ದೈವೀ ಬದುಕನ್ನು ಸಾಗಿಸುವುದು ಹಿಂದೆಂದಿಗಿಂತಲೂ ಇಂದು ಮುಖ್ಯವಾಗಿದೆ. ಇಂತಹ ಮಾರ್ಗವನ್ನು ಹಿಡಿಯುವುದೇ ನಿಜವಾದ ಬದುಕು.

****

ಓದುಗರಿಗೆ ವಿಶೇಷ ಸೂಚನೆ

ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದರೆ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswamiji@gmail.com**, *kalyana.kirana1134@gmail.com* ಮೇಲ್‌ಗೆ ಕಳುಹಿಸಿ

Digitalized by e-Sahithya Documentation Forum
Sponsored by Sarayu Foundation Trust

ವಚನ ಸಾಹಿತ್ಯದ ಬಹುಮುಖಿ ಚಿಂತನೆ-2

-ಸಚ್ಚಿದಾನಂದ ಚಟ್ನಳಿ

(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)

ರಾಜಕೀಯ ರಂಗದವರಿಗೆ ಮೇಲಿನ ವಚನಗಳನ್ನು ಅನ್ವಯಿಸುವುದಾದರೆ ಅಲ್ಲೂ ಅವರು ಹಂತ ಹಂತವಾಗಿ, ತಮ್ಮ ಪರಿಶ್ರಮ ಮತ್ತು ಜನಪರ ಕಾಳಜಿಯ ಮುಖಾಂತರ ಮೇಲೇರಬೇಕೆ ಹೊರತು ಇನ್ನೊಬ್ಬರನ್ನು ತುಳಿದು, ಗೂಂಡಾ ಪ್ರವೃತ್ತಿಯ ಮೂಲಕ ಮೇಲೆರುವ ಪ್ರಯತ್ನ ಮಾಡಬಾರದು. ಇದಕ್ಕೆ ಸ್ವತಃ ಗುರುಬಸವಣ್ಣನವರ ಜೀವನವೇ ಸಾಕ್ಷಿಯಾಗಿದೆ. ಗುರು ಬಸವಣ್ಣನವರು ಯಾವುದೇ ಹುದ್ದೆಗಳ ಅಪೇಕ್ಷೆಯಿಲ್ಲದೆ ಕರಣಿಕ ಕಾಯಕದಿಂದ ವೃತ್ತಿ ಜೀವನ ಆರಂಭಿಸಿದವರು ತಮ್ಮಲ್ಲಿರುವ ಜನಪರ ಕಾಳಜಿ ಸಮಾಜೋದ್ಧಾರದ ಕಳಕಳಿಯಿಂದ ಪ್ರಧಾನಿಯಾಗಿರುವುದನ್ನು ನೋಡುತ್ತೇವೆ.

"*Going at it too fast will only slow down the things at the end* "(ಗೋಯಿಂಗ್ ಅಟ್ ಇಟ್ ಟೂ ಫಾಸ್ಟ್ ವಿಲ್ ಒನ್ಲೀ ಸ್ಲೋಡೌನ್ ದಿ ಥಿಂಗ್ಸ್ ಅಟ್ ದಿ ಎಂಡ್) ಎನ್ನುವ ಇನ್ನೊಂದು ಗಾದೆ ಇದೆ. ತುಂಬಾ ವೇಗವಾಗಿ ಸಾಧಿಸಬೇಕು ಎನ್ನುವವರ ಸಾಧನೆ ಕೊನೆಯಲ್ಲಿ ಅತ್ಯಂತ ನಿಧಾನಕ್ಕೆ ಬಂದು ನಿಲ್ಲುತ್ತದೆ ಎನ್ನುವುದು ಮೇಲಿನ ಗಾದೆಯ ಅರ್ಥ.

ಹೀಗೆ ಯಾರು ಮೆಲ್ಲ ಮೆಲ್ಲನೆ ತಮ್ಮ ಸಾಧನೆಯನ್ನು ಮುಂದುವರೆಸುತ್ತಾರೆ ಅವರು ಜೀವನದಲ್ಲಿ ಬರುವ ಎಡಹುಗುಳಿಗಳನ್ನು ದಾಂಟಿ ಮುಂದಿನ ಸಾಧನೆಯಲ್ಲಿ ಬರಬರನೆ ಮೇಲೆರುತ್ತಾರೆ. ಯಾರು ಒಂದೇ ದಿನ ಅಥವಾ ಕೆಲವೇ ದಿನಗಳಲ್ಲಿ ಬರಬರನೆ ಮೇಲೆರಬೇಕು ಎನ್ನುತ್ತಾರೋ ಅವರು ಎಡುಹುಗುಳಿಗಳಲ್ಲೇ ಬಿದದ್ದು ತಮ್ಮ ಸಾಧನೆಯನ್ನು ಕುಂಠಿತ ಗೊಳಿಸುತ್ತಾರೆ. ಇದು ವಚನ ಸಾಹಿತ್ಯದ ಬಹುಮುಖಿ ಚಿಂತನೆಗಳಲ್ಲೊಂದು. ಮತ್ತೊಂದು ಚಿಂತನೆಯೊಂದಿಗೆ ಇದೇ ಸಂಚಿಕೆಯಲ್ಲಿ ಹಾಜರಾಗಿದ್ದೇನೆ.

ವಚನ ಸಾಹಿತ್ಯ ಯುದ್ಧವನ್ನು ವಿರೋಧಿಸುತ್ತದೆ.

ಯುದ್ಧವೆಂದರೆ ಅದೊಂದು ಭಯಾನಕ ಸನ್ನಿವೇಶ. ಅಂಥ ಸನ್ನಿವೇಶವನ್ನು ಯುದ್ಧವಾದ ನಂತರವೇ ಅನುಭವಕ್ಕೆ ತಂದುಕೊಳ್ಳಬೇಕಾಗಿಲ್ಲ, ಯುದ್ಧದ ಸನ್ನಿವೇಶ ಕಲ್ಪಿಸಿಕೊಂಡರೂ ಎಂಥವರಿಗಾದರೂ ಅದರ ಪರಿಣಾಮದ ಬಗ್ಗೆ ಅರಿವಾಗುತ್ತದೆ. ಯುದ್ಧದಿಂದ ಅನೇಕ ಸಾವು ನೋವುಗಳುಂಟಾಗುತ್ತವೆ. ಯುದ್ಧದ ಪರಿಣಾಮದಿಂದ ಅನೇಕ ಜನ ಮಹಿಳೆಯರು ವಿಧವೆಯರಾಗುತ್ತಾರೆ, ಅನೇಕ ಮಕ್ಕಳು ಅನಾಥರಾಗುತ್ತಾರೆ. ಅನೇಕ ಜನ ಅಮಾಯಕರೂ ಸಾಯುತ್ತಾರೆ ಮತ್ತು ಅನೇಕರು ಗಾಯಗೊಳ್ಳುತ್ತಾರೆ. ಯುದ್ಧದಿಂದಾಗಿ ಭೌಗೋಳಿಕ ಪ್ರದೇಶವೂ ತನ್ನ ನೈಸರ್ಗಿಕತೆಯನ್ನು ಕಳೆದುಕೊಂಡು ಹಾಳಾಗುತ್ತದೆ. ಒಟ್ಟಾರೆ ಯುದ್ಧದ ಪರಿಣಾಮಗಳು ಅತ್ಯಂತ ಕರುಣಾಜನಕ, ಹೃದಯವಿದ್ರಾವಕ, ಮನಕಲಕುವಂತಾಗಿರುತ್ತವೆ.

ಈ ಹಿಂದೆ ಜಗತ್ತು ಅನೇಕ ಯುದ್ಧಗಳನ್ನು ಕಂಡಿದೆ, ಎರಡು ಮಹಾಯುದ್ಧಗಳನ್ನೂ ಕಂಡಿದೆ. ಎರಡನೇ ಮಹಾಯುದ್ಧದಲ್ಲಿ ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ಎನ್ನುವ ಪಟ್ಟಣಗಳ ಮೇಲೆ ಅಣುಬಾಂಬ್‌ಗಳನ್ನು ಹಾಕಲಾಯಿತು. ಇದರ ಪರಿಣಾಮದಿಂದ ಇಂದಿಗೂ ಆ ಎರಡೂ ಪಟ್ಟಣಗಳ ಭೌಗೋಳಿಕ ಪರಿಸರ ಶಾಶ್ವತವಾಗಿ ಊನವಾಯಿತು. ಅಣುಬಾಂಬಿನ ಪರಿಣಾಮವಾಗಿ ಇಂದಿಗೂ ಆ ಪಟ್ಟಣಗಳಲ್ಲಿ ಅತಿ ಹೆಚ್ಚಿನ ಅಂಗವಿಕಲ ಮಕ್ಕಳು ಜನಿಸುತ್ತಿವೆ. ಅಲ್ಲಿನ ಪರಿಸರದ ಮೇಲೆ ಯುದ್ಧ ಶಾಶ್ವತವಾದ ಗಾಢ ಪರಿಣಾಮವನ್ನು ಬೀರಿದೆ.

ಇಂದು ಸಹ ಜಗತ್ತು ಯುದ್ಧ ಭೀತಿಯಿಂದ ನಲುಗುತ್ತಿದೆ. ಸಿರಿಯಾದಂಥ ದೇಶದಲ್ಲಿ ನಿತ್ಯವೂ ಯುದ್ಧ ನಡೆಯುತ್ತಿದೆ.ಅನೇಕ ಉಗ್ರ ಸಂಘಟನೆಗಳು ಹುಟ್ಟಿಕೊಂಡು ಜಗತ್ತನ್ನು ಭಯಭೀತವಾದ ವಾತಾವರಣದಲ್ಲಿ ಮುಳುಗಿಸಿವೆ. ಭಾರತ ದೇಶದ ಮೇಲೂ ನಿರಂತರ ಆಕ್ರಮಣಗಳು, ದಾಳಿಗಳು, ಭಯೋತ್ಪಾದಕರಿಂದ ಹೀನ ಕೃತ್ಯಗಳು ನಡೆಯುತ್ತಲೇ ಇವೆ. ಕೆಲವು ತಿಂಗಳುಗಳ ಹಿಂದೆ ಪಠಾಣ ಕೋಟ್ ಎನ್ನುವ ಸೇನಾ ನೆಲೆಯ ಮೇಲೆ ದಾಳಿ ಮಾಡಿದರು. ಮೊನ್ನೆ 24-04-2017 ರಂದು ಚಂಡೀಘಡ ರಾಜ್ಯದ ಸುಕ್ಮಾ ಜಿಲ್ಲೆಯಲ್ಲಿ ನಮ್ಮ ಸೈನಿಕರ ಮೇಲೆ ಮಾವೋವಾದಿಗಳು ದಿಢೀರನೆ ದಾಳಿ ಮಾಡಿದ್ದರು. ಇದರಿಂದ 75ಕ್ಕೂ ಹೆಚ್ಚು ಸೈನಿಕರು ಹುತಾತ್ಮರಾದರು. ಇದರಿಂದ ಅವರವರ ಕುಟುಂಬಗಳು ಅನಾಥರಾದವು.

ಪ್ರಪಂಚದ ಇತಿಹಾಸ ಮತ್ತು ಭಾರತದ ಇತಿಹಾಸವನ್ನು ನೋಡಿದರೆ ಗುರು ಬಸವಣ್ಣನವರಿಗಿಂತ ಮುಂಚೆ ಅನೇಕ ಯುದ್ಧಗಳಾಗಿವೆ. ಅವರ ನಂತರವೂ ಯುದ್ಧಗಳಾಗಿವೆ. ಕ್ರಿಪೂ. 324ರಲ್ಲಿ ಚಂದ್ರಗುಪ್ತ ಮೌರ್ಯ ಮತ್ತು ಅವರ ಮಂತ್ರಿ ಚಾಣಕ್ಯ (ವಿಷ್ಣುಗುಪ್ತ) ಅನೇಕ ಯುದ್ಧಗಳನ್ನು ಮಾಡಿದ್ದರು. ಸಾಮಾನ್ಯವಾಗಿ ಅಂದಿನ ಕಾಲದ ರಾಜರ ಮಂತ್ರಿಗಳು ಯುದ್ಧ ನಿಪುಣರಾಗಿರುತ್ತಿದ್ದರು. ಕ್ರಿಪೂ 262ರಲ್ಲಿ ಚಕ್ರವರ್ತಿ ಅಶೋಕನು ಆಳುತ್ತಿದ್ದ ಕಾಲ ಅವರಿಗೆ ರಾಧಗುಪ್ತನೆಂಬ ಮಂತ್ರಿಯಿದ್ದ. ಅಶೋಕನು ಮಾಡಿದ ಕಳಿಂಗ ಯುದ್ಧ ಈ ಜಗತ್ತು ಎಂದೆಂದಿಗೂ ಮರೆಯದ ಯುದ್ಧ. ಏಕೆಂದರೆ ಅಂದಿನ ಕಾಲದಲ್ಲಿಯೇ ಅಶೋಕನ ಸೈನಿಕರು ಮತ್ತವರ ಪ್ರಜೆಗಳು ಸೇರಿ ಒಂದು ಲಕ್ಷಕ್ಕೂ ಹೆಚ್ಚು ಜನ ಮೃತಪಟ್ಟಿದ್ದರು. ಹೆಚ್ಚುಕಡಿಮೆ ಅದರಷ್ಟೇ ಕಳಿಂಗ ರಾಜನ ಸೈನಿಕರು ಮತ್ತು ಪ್ರಜೆಗಳೂ ಮೃತಪಟ್ಟಿದ್ದರೆಂದು ಇತಿಹಾಸಕಾರರು ಹೇಳಿದ್ದಾರೆ. ಕಾರಣ ಅಂದಿನ ಯುದ್ಧಗಳು ವರ್ಷಗಳವರೆಗೆ/ ದಶಕಗಳವರೆಗೆ ನಡೆಯುತ್ತಿದ್ದವು.

ಯುದ್ಧದಲ್ಲಿ ಆದ ಸಾವು ನೋವುಗಳನ್ನು ಸ್ವತಃ ನೋಡಿದ ಚಕ್ರವರ್ತಿ ಅಶೋಕ ಅತ್ಯಂತ ದುಃಖಿತನಾದ. ಮನಪರಿವರ್ತನೆಗೊಂಡು ಇನ್ನು ಮುಂದೆ ಯುದ್ಧ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಬೌದ್ಧ ಧರ್ಮ ಸ್ವೀಕರಿಸಿ ಅದನ್ನು ಪ್ರಚಾರ ಮಾಡುತ್ತ ಮುಂದೆ ತುಂಬಾ ಒಳ್ಳೆಯ ಕಾರ್ಯಗಳನ್ನು ಮಾಡಿದ್ದನಾದರೂ ಒಬ್ಬ ಚಕ್ರವರ್ತಿ ಹಾಗು ಅವರ ಮಂತ್ರಿಗೆ ಯುದ್ಧದ ಪರಿಣಾಮಗಳ ಬಗ್ಗೆ ಮುಂದಾಲೋಚನೆ ಇರಬೇಕು

Digitalized by e-Sahithya Documentation Forum
Sponsored by Sarayu Foundation Trust

ಅದರಿಂದಾಗುವ ಸಾವು, ನೋವು ಪರಿಣಾಮಗಳನ್ನು ಯುದ್ಧಮಾಡಿಯೇ ತಿಳಿದುಕೊಳ್ಳಬೇಕಾಗಿಲ್ಲ.

ರಾಮಾಯಣ ಯುದ್ಧ (ಕ್ರಿಪೂ.6000), ಮಹಾಭಾರತ ಯುದ್ಧ(ಕ್ರಿಪೂ. 5000) ತರೈನ ಯುದ್ಧ(1191), ಚಂದ್ರವಾರ್ ಕದನ (1194), ಪಾಣಿಪಟ್ ಕದನ (1526), ತಾಳಿಕೋಟೆ ಕದನ (1565),ಪ್ಲಾಸಿ ಕದನ(1757), ಬಾಕ್ಸಾರ ಕದನ(1764), ಇಂಥ ಅತ್ಯಂತ ಭಯಾನಕ ಯುದ್ಧಗಳು ಆಗಿಹೋಗಿವೆ. ಕೆಲವೊಂದು ಯುದ್ಧಗಳು ಒಂದೊಂದು ಸಂತತಿಯನ್ನೇ ಅಳಿಸಿಹಾಕಿವೆ. ಅನೇಕ ಮೌಲ್ಯ ಹಾಗು ಆದರ್ಶಗಳನ್ನು ಕೊಂದುಹಾಕಿವೆ.

ಹೀಗೆ ಇತಿಹಾಸದಲ್ಲಿ ಎಲ್ಲಾ ರಾಜರೂ, ಅರಸರೂ, ಚಕ್ರವರ್ತಿಗಳು, ಸಾರ್ವಭೌಮರೂ ಮತ್ತು ಅವರ ಮಂತ್ರಿಗಳು ಒಂದಿಲ್ಲ ಒಂದು ರೀತಿಯ ಯುದ್ದವನ್ನು ಮಾಡಿಯೇ ಮಾಡಿದ್ದಾರೆ ಅನೇಕ ಸಾವು ನೋವುಗಳಿಗೆ ಕಾರಣರಾಗಿದ್ದಾರೆ.

ದೇಶದಲ್ಲಿ ಇಂಥ ಯುದ್ಧ ಸನ್ನಿವೇಶಗಳ ಕತ್ತಲೆ ಕಾರ್ಮೋಡ ಕವಿದಿದ್ದಾಗ ರವಿರಶ್ಮಿಯಂತೆ ಉದಯಿಸಿದ ಗುರು ಬಸವಣ್ಣನವರು ಕಲ್ಯಾಣಿಚಾಲುಕ್ಯ ರಾಜ್ಯದ ಪ್ರಧಾನಿಯಾಗಿ ರಾಜ್ಯವನ್ನು ಮುನ್ನಡೆಸಿದ ಪರಿಯೇ ಬೇರೆಯಾಗಿದೆ.

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂಭೋ, ನಿಮ್ಮ ಧರ್ಮ!
ಅರಸಾಡದಿರಿಂಭೋ, ನಿಮ್ಮ ಧರ್ಮ!
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ,
ಲಿಂಗದೇವಾ ಏಕೋಭಾವ.

ಗುರು ಬಸವಣ್ಣನವರು(1134-1196) ಬಸವಕಲ್ಯಾಣದಲ್ಲಿ ಚಾಲುಕ್ಯ ಅರಸ ಬಿಜ್ಜಳನ ರಾಜ್ಯದಲ್ಲಿ ಮಹಾಮಂತ್ರಿಯಾಗಿ ಆಳ್ವಿಕೆ ನಡೆಸುತ್ತಿದ್ದ ಕಾಲವದು. ಜೊತೆಗೆ ಅನುಭಾವ ಮಂಟಪ ಮತ್ತು ಮಹಾಮನೆಗಳ ನಿರ್ಮಾಣ ಮಾಡಿ ಧಾರ್ಮಿಕ ಚಟುವಟಿಕೆಗಳನ್ನು ಉತ್ತುಂಗಕ್ಕೇರಿಸಿದ ಕಾಲವದು. ಮಹಾಮನೆಯಲ್ಲಿ ನಡೆಯುತ್ತಿದ್ದ ದಾಸೋಹದಲ್ಲಿ ದಿನ ನಿತ್ಯವೂ ಸಾವಿರಾರು ಜನರು ಪ್ರಸಾದ ಸ್ವೀಕರಿಸುತ್ತಿದ್ದರು. ನಿತ್ಯವೂ ನಡೆಯುತ್ತಿದ್ದ ದಾಸೋಹದಲ್ಲಿ ಸಾಕಷ್ಟು ಹಾಲು, ಮೊಸರು ತುಪ್ಪ, ಬೇಕಾಗುತ್ತಿತ್ತು. ಇದಕ್ಕಾಗಿ ಮಹಾಮನೆಯಲ್ಲಿ ಒಂದು ಗೋಶಾಲೆ ತೆಗೆದು ಸಾಕಷ್ಟು ಆಕಳುಗಳನ್ನು ಸಾಕಲಾಗಿತ್ತು. ಆ ಆಕಳುಗಳನ್ನು ನೋಡಿಕೊಳ್ಳಲ್ಲಿಕ್ಕೆ, ಮೇಯಿಸಲಿಕ್ಕೆ ಒಂದು ತಂಡವೇ ಅಲ್ಲಿತ್ತು.

ಹೀಗೆ ಒಂದು ದಿನ ಗೋಪಾಲಕರು ಆಕಳುಗಳನ್ನು ಮೇಯಿಸಲಿಕ್ಕೆ ಕರೆದುಕೊಂಡು ಹೋದಾಗ ಗುರು ಬಸವಣ್ಣನವರ ರಾಜಕೀಯ ದ್ವೇಷಿಗಳು ಗೋಪಾಲಕರ ಮೇಲೆ ದಾಳಿ ಮಾಡಿ ಎಲ್ಲಾ ಆಕಳುಗಳನ್ನು ಅಲ್ಲಿಂದ ಅಪಹರಿಸಿಕೊಂಡು ಹೋಗುತ್ತಾರೆ.

ಇಂಥ ಸಂದರ್ಭದಲ್ಲಿ ಗೋಪಾಲಕರು ಓಡಿ ಬಂದು ಗುರು ಬಸವಣ್ಣನವರಿಗೆ ವಿಷಯ ತಿಳಿಸುತ್ತಾರೆ. ಆಗ ಸಹಜವಾಗಿ ಮಹಾಮನೆಯ ಇನ್ನಿತರ ಶರಣರಿಗೂ ವಿಷಯ ಗೊತ್ತಾಗಿ ಕೆಲವರು ಬೊಬ್ಬೆಯಿಟ್ಟರೆ ಇನ್ನು ಕೆಲವು ತೀವ್ರವಾದಿ ಶರಣರು ಕೋಪದಿಂದ

ಕಳ್ಳರನ್ನು ಹೊಡೆಯೋಣ ಅವರನ್ನು ದಂಡಿಸೋಣ ಎಂದು ಅರಚುತ್ತಿದ್ದರು.

ಪ್ರಧಾನಿ ಹಾಗೂ ದಂಢಾಧೀಶರಾದ ಗುರು ಬಸವಣ್ಣನವರು ಕ್ಷಣಮಾತ್ರದಲ್ಲಿ ತಮ್ಮ ಸೈನ್ಯವನ್ನು ಕಳುಹಿಸಿ ಅಪಹರಣಕಾರರೊಂದಿಗೆ ಯುದ್ಧಮಾಡಿ ಗೋವುಗಳನ್ನು ಬಿಡಿಸಿಕೊಂಡು ಬರಬಹುದಿತ್ತು. ಆದರೆ ಗುರು ಬಸವಣ್ಣನವರು ಬಲಪ್ರಯೋಗದಿಂದ ಇನ್ನೊಬ್ಬರನ್ನು ತಿದ್ದುವುದಕ್ಕಿಂತ ಮಾನವ ಪ್ರೇಮ, ವಿಶ್ವಪ್ರೇಮ ಪ್ರಯೋಗದ ಮೂಲಕ ಮಾಡುವ ಪರಿವರ್ತನೆ ಅತ್ಯಂತ ಶ್ರೇಷ್ಠ ಎಂದು ನಂಬಿದ್ದರು. ಬಂದ ಗೋಪಾಲಕರಿಗೆ ಮತ್ತು ಕೋಪದಿಂದ ಅರಚುತ್ತಿದ್ದವರಿಗೆ ಆಕಳುಗಳನ್ನು ಕಳ್ಳರು ಕದ್ದೊಯ್ದಿದ್ದಾರೆ ಎಂದು ದಯವಿಟ್ಟು ಬೊಬ್ಬೆ ಹಾಕಬೇಡಿ, ಕೋಪದಿಂದ ಕಿರುಚಾಡಬೇಡಿ ಎಂದು ಮನವಿ ಮಾಡಿಕೊಳ್ಳುತ್ತಾರೆ. ಪ್ರತಿಯೊಬ್ಬ ಮಾನವ ಹಾಗು ಪ್ರತಿಯೊಂದು ಜೀವಿಯಲ್ಲೂ ದೇವರ ಚೈತನ್ಯ ಕಂಡ ಗುರು ಬಸವಣ್ಣನವರ ಮನೋಭಾವನೆಯ ಪರಿಯೇ ಬೇರೆ. ಎಲ್ಲರ ಹೃದಯದಲ್ಲೂ ದೇವನಿರುವಾಗ ಯಾರೇ ಪ್ರಸಾದ ಸೇವಿಸಿದರೂ ಅದು ದೇವನಿಗೆ ಸಲ್ಲುವುದು. ಯಾರೇ ಸೌಲಭ್ಯಗಳನ್ನು ಉಪಯೋಗಿಸಿದರೂ ಅದು ದೇವನಿಗೆ ಸಲ್ಲುವುದು ಎಂದು ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ ಎನ್ನುವ ವಿಶ್ವಪ್ರೇಮದ ಸಂದೇಶವನ್ನು ಕೊಟ್ಟಿದ್ದಾರೆ. ಮಹಾಮನೆಯಲ್ಲಿ ಹಸುಗಳನ್ನು ಸಾಕಿರುವುದು ದಾಸೋಹಕ್ಕಾಗಿ ಹಾಲು ಬೇಕೆಂದು. ಅದೇ ಹಾಲು ಮತ್ತೆಲ್ಲೋ ಉಪಯೋಗವಾಗುತ್ತಿದೆ ಅದು ದಾಸೋಹವೇ ಎಂದು ಹೇಳಿದ ಗುರು ಬಸವಣ್ಣನವರು ಆಕಳುಗಳ ಬರುವಿಕೆಗಾಗಿ ಕಾಯುತ್ತಿದ್ದ ಎಳೆಗರುಗಳನ್ನು ಬಂಡಿಯಲ್ಲಿ ಹಾಕಿಸಿ ಆಕಳುಗಳನ್ನು ಅಪಹರಿಸಿಕೊಂಡು ಹೋಗಿ ಕಟ್ಟಿರುವ ಜಾಗಕ್ಕೆ ತಲುಪಿಸುತ್ತಾರೆ. ಇದರಿಂದ ಕಳ್ಳರ ಮನಸ್ಸಿಗೆ ಹೇಗಾಗಿರಬಹುದು! ಉರಿಯುವ ಕೆಂಡದ ಮೇಲೆ ಭೋರ್ಗರೆಯುವ ಮಳೆಸುರಿದಂತೆ. ಕ್ಷಣಾರ್ಧದಲ್ಲಿ ಹೃದಯ ಪರಿವರ್ತನೆ!! ಈ ಘಟನೆಯಿಂದ ಯಾವ ಯುದ್ಧವೂ ಮಾಡಲಾರದ ಪರಿವರ್ತನೆ ಗುರು ಬಸವಣ್ಣನವರ ಮಾನವ ಪ್ರೇಮ ಮಾಡಿತು.

ದೊಡ್ಡರಾಜ್ಯದ ಹೆಚ್ಚಿನ ಸೇನಾ ಬಲ ಹೊಂದಿದ ಚಕ್ರವರ್ತಿಗಳಿಗೆ, ಸಣ್ಣರಾಜ್ಯದ ಮಾಂಡಲೀಕ ಅರಸರು ಕಪ್ಪಕಾಣಿಗಳನ್ನು ಸಲ್ಲಿಸಬೇಕೆಂಬುದು ನಿಯಮವಿತ್ತು. ಕಪ್ಪಕಾಣಿಕೆ ಸಲ್ಲಿಸದಿದ್ದರೆ ಅವರ ಮೇಲೆ ಯುದ್ಧಮಾಡುತ್ತಿದ್ದರು. ಈ ಹಿಂದೆಯೇ ತಿಳಿಸಿದ ಹಾಗೆ ಅರಸರು ಚಕ್ರವರ್ತಿಗಳೆಂದರೆ ಅವರು ಯುದ್ಧವನ್ನು ಮಾಡುವವರು ತಮಗಿಂತ ದುರ್ಬಲ ಅರಸರ ಮೇಲೆ ಕೆಲವೊಮ್ಮೆ ಸಬಲ ಅರಸರ ಮೇಲೂ ಕುತಂತ್ರದಿಂದ ಯುದ್ಧಮಾಡಿ, ದಂಡೆತ್ತಿ ಹೋಗಿ ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿದ್ದರು. ಇನ್ನೊಂದು ರಾಜ್ಯದ ಸಂಪತ್ತು ದವಸ ಧಾನ್ಯಗಳನ್ನು ದೋಚುತ್ತಿದ್ದರು.

ಗುರು ಬಸವಣ್ಣನವರ ಯುದ್ಧವಿರೋಧ ಮನೋಭಾವನೆಯ ಬಗ್ಗೆ ಕಾವ್ಯಗಳಲ್ಲಿ ಇನ್ನೊಂದು ಘಟನೆ ಉಲ್ಲೇಖವಾಗಿದೆ. ಬಿಜ್ಜಳ ಚಕ್ರವರ್ತಿಯ ರಾಜ್ಯದ ಸುತ್ತ ಮುತ್ತ

Digitalized by e-Sahithya Documentation Forum
Sponsored by Sarayu Foundation Trust

ಅನೇಕ ಸಣ್ಣ ಸಣ್ಣ ಅರಸರು ಸಹ ರಾಜ್ಯವಾಳುತ್ತಿದ್ದರು. ಅವರಿಂದ ಕಪ್ಪ ಕಾಣಿಕೆ ಬಿಜ್ಜಳನಿಗೆ ಬರುತಿತ್ತು. ಅವರಲ್ಲಿ ಕೆಲವರು ಸ್ವಾಭಿಮಾನಿಯಾಗಿದ್ದರು. ಯುದ್ಧವನ್ನು ಎದುರಿಸುತ್ತೇವೆಯೇ ಹೊರತು ಕಪ್ಪ ಕಾಣಿಕೆ ಕೊಡುವುದಿಲ್ಲ ಎನ್ನುವ ಮನೋಭಾವದವರು.

ಸಿಂಹರಾಜ ಎನ್ನುವ ಮಾಂಡಲೀಕ ಅರಸ ಇಂಥ ಸ್ವಭಾವದವನಾಗಿದ್ದನು. ಆದ್ದರಿಂದ ಅಪಾರ ಸೈನ್ಯ ಬಲಹೊಂದಿದ್ದ ಬಿಜ್ಜಳನು ಸಿಂಹರಾಜನ ಮೇಲೆ ಯುದ್ಧ ಸಾರಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ. ಆ ಕಡೆ ಸಿಂಹ ರಾಜನು ಕೂಡ ಕತ್ತಿಯನ್ನು ಝಳಪಿಸುತ್ತ ಯುದ್ಧಕ್ಕೆ ಶಸ್ತ್ರಾಸ್ತ್ರಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದ. ಯುದ್ಧವನ್ನು ಇಷ್ಟ ಪಡದ ಅದನ್ನು ವಿರೋಧಿಸುವ ಗುರು ಬಸವಣ್ಣನವರು ಸಿಂಹರಾಜನ ಬಳಿಗೆ ತೆರಳಿ ಯುದ್ಧದ ಭೀಕರ ಪರಿಣಾಮಗಳ ಬಗ್ಗೆ ವಿವರಿಸುತ್ತಾರೆ. ಬಿಜ್ಜಳ ಅರಸರು ಪ್ರಜಾಪ್ರೇಮಿ ಯಾಗಿದ್ದಾರೆ, ತಾವೂ ಪ್ರಜಾ ಪ್ರೇಮಿಯಾಗಿದ್ದೀರಿ. “ಅಲ್ಲಿ ಉಂಬಡೆ ಸಂಗ ಇಲ್ಲಿ ಉಂಬಡೆ ಸಂಗ” ಎನ್ನುವ ವಿಚಾರವನ್ನು ಸಿಂಹರಾಜನಿಗೆ ಮನದಟ್ಟು ಮಾಡಿದ ಗುರು ಬಸವಣ್ಣನವರು, ಸಿಂಹರಾಜನು ಬಿಜ್ಜಳ ಅರಸನಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುವಂತೆ ಮಾಡುತ್ತಾರೆ. ಇದರಿಂದ ನಡೆಯಬೇಕಾದ ಘೋರ ಯುದ್ಧವು ತಪ್ಪಿ ಹೋಯಿತು. ಈ ಘಟನೆಯನ್ನು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಾಹಾದೇವಿಯವರು ಚಿತ್ರಿಸಿದ್ದಾರೆ.

ಇಲ್ಲಿ ಗುರು ಬಸವಣ್ಣನವರ ಮಾನವೀಯ ಹೃದಯ ನನ್ನನ್ನು ಶರಣಾಗುವಂತೆ ಮಾಡಿದೆ ಎಂದು ಸಿಂಹರಾಜನು ಹೇಳಿದರೆ, ಸಿಂಹರಾಜನ ಸಮಯ ಪ್ರಜ್ಞೆಯಿಂದ ಇದು ಸಾಧ್ಯವಾಯಿತು ಎಂದು ಗುರು ಬಸವಣ್ಣನವರು ಸೋತ ಸಿಂಹರಾಜನಲ್ಲಿ ಗೆಲುವನ್ನು ತುಂಬುತ್ತಾರೆ. ಇದು ನಿಜವಾದ ಮುತ್ಸದ್ಧಿತನ, ನಿಜವಾದ ಪ್ರಜಾಪ್ರೇಮಿ ಪ್ರಧಾನಿಗಿರಬೇಕಾದ ಗುಣಲಕ್ಷಣ.

ಗುರು ಬಸವಣ್ಣನವರು ಸಂಪ್ರದಾಯಕ್ಕೆ ವಿರುದ್ಧವಾದ ವರ್ಣಾಂತರ ವಿವಾಹ ಮಾಡಿಸಿದ್ದಾರೆ ಎಂದು ಆರೋಪಿಸಿ ಅವರಿಗೆ ಗಡಿಪಾರು ಶಿಕ್ಷೆ ವಿಧಿಸುವರೆ ರಾಜನಿಗೆ ಪ್ರೇರೇಪಿಸಿ ಆಜ್ಞೆ ಹೊರಡಿಸಿದಾಗ ಅನೇಕ ಶರಣರು ಅದನ್ನು ವಿರೋಧಿಸಿದ್ದರು. ಯುದ್ಧವನ್ನು ಬಲ್ಲ ಮಡಿವಾಳ ಮಾಚಿದೇವರು ನಾವು ಈ ಅನ್ಯಾಯದ ವಿರುದ್ಧ ಹೋರಾಡುತ್ತೇವೆ ಎಂದು ಹೇಳಿದ್ದರು. ಆ ಸಂದರ್ಭದಲ್ಲೂ ಯುದ್ಧವನ್ನು ವಿರೋಧಿಸುವ ಗುರು ಬಸವಣ್ಣವನರು ಗಡಿಪಾರು ಶಿಕ್ಷೆ ಒಪ್ಪಿಕೊಂಡು ಕೂಡಲಸಂಗಮಕ್ಕೆ ಹೊರಟರೇ ವಿನಃ ಮಾಚಿದೇವರಿಗೆ ಯುದ್ಧಕ್ಕಾಗಿ ಅನುಮತಿ ನೀಡಲಿಲ್ಲ.

‘ಭಾರತ ದೇಶದ ಮಿಸೈಲ್ ತಂತ್ರಜ್ಞಾನದ ಪಿತಾಮಹ’ ಎಂದು ಕರೆಯಲ್ಪಡುವ ನಮ್ಮ ದೇಶದ ಮಾಜಿ ರಾಷ್ಟ್ರಪತಿ ಲಿಂಗೈಕ್ಯ ಶರಣ ಅಬ್ದುಲ್ ಕಲಾಮ್ ರವರಿಗೆ. ವಿದ್ಯಾರ್ಥಿಯೊಬ್ಬರು ಒ[illegible] ಪ್ರಶ್ನೆಯನ್ನು ಕೇಳಿದ್ದರು “ನೀವು ಶಾಂತಿಯ ಮಾತನಾಡುತ್ತೀರಿ ಆದರೆ ಮಿಸೈಲ್‌ಗಳನ್ನು ನಿರ್ಮಿಸುತ್ತೀರಿ ಎರಡೂ ತದ್ವಿರುದ್ಧವಲ್ಲವೇ?” ಎಂದು. ಆಗ

ಅಬ್ದುಲ್ ಕಲಾಮ್‌ರವರು “ಶಾಂತಿ ದೇಶದ ಆಂತರಿಕ ರಕ್ಷಣೆಗೆ ಭದ್ರತೆಗೆ ಬೇಕು, ಮಿಸೈಲ್ ಬಾಹ್ಯ ಶತ್ರುಗಳಿಂದ ರಕ್ಷಿಸಿಕೊಳ್ಳಲು ಬೇಕು” ಎಂದಿದ್ದರು.

ಒಂದು ದೇಶದ ಸೈನ್ಯಕ್ಕೆ ರಕ್ಷಣಾಪಡೆ(*Defence*) ಎನ್ನುವ ಹೆಸರಿರುತ್ತದೆಯೇ ಹೊರತು ಯುದ್ಧಪಡೆ ಎಂದು ಹೆಸರಿರುವುದಿಲ್ಲ. ಯುದ್ಧಕಲೆಯನ್ನು ಕಲಿತುಕೊಳ್ಳುವುದು ರಕ್ಷಣಾ ಪಡೆಯನ್ನು ಹೊಂದುವುದು ತಪ್ಪಲ್ಲ ಪ್ರತಿಯೊಬ್ಬರೂ ಆತ್ಮ ರಕ್ಷಣೆ ಧರ್ಮರಕ್ಷಣೆಯ ದೇಶ ರಕ್ಷಣೆ ಪ್ರಸಂಗ ಬಂದಾಗ ಯುದ್ಧ ಮಾಡಲೇ ಬೇಕು. ಆದರೆ ಆಕ್ರಮಣಕಾರಿ ಯುದ್ಧವನ್ನು ವಚನ ಸಾಹಿತ್ಯ ವಿರೋಧಿಸುತ್ತದೆ. ಗುರು ಬಸವಣ್ಣನವರ ನೇತೃತ್ವದಲ್ಲಿ ಶರಣರು ಯುದ್ಧಕಲೆಯನ್ನು ಕಲಿತವರಾಗಿದ್ದರು. ಅದನ್ನು ಅವರು ಆತ್ಮ ರಕ್ಷಣೆ, ವಚನಸಾಹಿತ್ಯ ರಕ್ಷಣೆ ಹಾಗು ಧರ್ಮ ರಕ್ಷಣೆಗಾಗಿ ಪ್ರಯೋಗಿಸಿದ್ದರೇ ಹೊರತು ಯಾರೂ ಆಕ್ರಮಣಕಾರಿಗಳಾಗಿರಲಿಲ್ಲ.

ವಚನ ಸಾಹಿತ್ಯದ ಈ ಮನೋಭಾವವನ್ನು, ಯುದ್ಧವಿರೋಧ ನೀತಿಯನ್ನು ಭಾರತ ದೇಶದ ಎಲ್ಲಾ ರಾಜ್ಯಗಳು ಅಳವಡಿಸಿಕೊಂಡರೆ ಇಲ್ಲಿರುವ ನದಿ ನೀರಿನ ಹಂಚಿಕೆಯ ವಿವಾದಗಳು, ಗಡಿ ಸಮಸ್ಯೆಗಳು, ಜನಾಂಗೀಯ ಜಗಳಗಳು, ಭಾಷೆಯ ಸಮಸ್ಯೆಗಳು ನಿವಾರಣೆಯಾಗಿ ಇಡೀ ಭಾರತ ದೇಶವೇ ಗುರು ಬಸವಣ್ಣನವರ ಕಲ್ಯಾಣ ರಾಜ್ಯವಾಗುತ್ತದೆ. ಶಾಂತಿ, ಪ್ರೀತಿ, ನೆಮ್ಮದಿಗಳ ನೆಲೆವೀಡಾಗುತ್ತದೆ, ಅಧ್ಯಾತ್ಮ ಆನಂದಗಳ ನಂದನವನವಾಗುತ್ತದೆ.

ಪ್ರಪಂಚದ ಎಲ್ಲಾ ರಾಷ್ಟ್ರಗಳು ತಮ್ಮ ವಿದೇಶಾಂಗ ನೀತಿಯಲ್ಲಿ ಗುರು ಬಸವಣ್ಣನವರ ‘ಅಲ್ಲಿ ಉಂಬಡೆ ಸಂಗ ಇಲ್ಲಿ ಉಂಬಡೆ ಸಂಗ’ ಎನ್ನುವ ಸೂತ್ರವನ್ನು ಅಳವಡಿಸಿಕೊಂಡರೆ ಇಡೀ ಜಗತ್ತೇ ಒಂದು ಕಲ್ಯಾಣ ರಾಜ್ಯವಾಗುತ್ತದೆ ಅದು ಶಾಂತಿ ಪ್ರೀತಿಗಳ ನೆಲೆವೀಡಾಗುತ್ತದೆ. ಇಡೀ ಭೂಲೋಕವೆ ಗುರು ಬಸವಣ್ಣನವರ, ಪರಮಾತ್ಮನ ಮಹಾಮನೆಯಾಗುತ್ತದೆ.

ಇಡೀ ವಚನ ಸಾಹಿತ್ಯದಲ್ಲಿ ಯುದ್ಧ ಮತ್ತು ಕದನ ಎನ್ನುವ ಪದಗಳೇ ಎಲ್ಲಿಯೂ ಬಳಕೆಯಾಗಿಲ್ಲ. ಎಂಟು ವಚನಗಳಲ್ಲಿ ‘ಕಾದುವ’ ಎನ್ನುವ ಶಬ್ದ ಬಳಕೆಯಾಗಿದೆ ಅದು ಕೇವಲ ಆಧ್ಯಾತ್ಮಿಕ ಸಾಧನೆಯ ಹೋಲಿಕೆಗಾಗಿ ಮಾತ್ರ, ನಾಲ್ಕೈದು ವಚನಗಳಲ್ಲಿ ‘ಕಾಳಗ’ಎನ್ನುವ ಪದ ಬಳಕೆಯಾಗಿದೆಯಾದರೂ ಆ ಕಾಳಗ ನಡೆಯಬೇಕಾಗಿರುವುದು ಕರಂಣಂಗಳಲ್ಲಿ ಎಂದು ಎಚ್ಚರಿಸಿ ಸೂಚಿಸಿದ್ದಾರೆ.

ಇದು ವಚನ ಸಾಹಿತ್ಯದ ಬಹುಮುಖಿ ಚಿಂತನೆಗಳಲ್ಲೊಂದು. ಮುಂದಿನ ಸಂಚಿಕೆಯಲ್ಲಿ ವಚನ ಸಾಹಿತ್ಯದ ಮತ್ತೊಂದು ಚಿಂತನೆಯೊಂದಿಗೆ ಬರುತ್ತೇನೆ. ಅಲ್ಲಿಯವರೆಗೆ ನಾವೆಲ್ಲರೂ ಯುದ್ಧ(ಕಾಳಗ)ವನ್ನು ಮಾಡುತ್ತಿರೋಣ, ಆದರೆ ನಮ್ಮ ಗಂಡ/ಹೆಂಡತಿ/ ನೆರೆಹೊರೆ/ ಅಕ್ಕ ಪಕ್ಕದ ರಾಜ್ಯಗೊಳೊಂದಿಗೆ/ನೆರೆಯ ರಾಷ್ಟ್ರದವವರೊಂದಿಗಲ್ಲ ಬದಲಾಗಿ ನಮ್ಮ ಅಂತರಂಗದಲ್ಲಿ ಅಡಗಿರುವ ಅವಗುಣಗಳೆಂಬ ಶತ್ರುಗಳೊಂದಿಗೆ.....!!

(ಮುಂದುವರಿಯುವುದು)

Digitalized by e-Sahithya Documentation Forum
Sponsored by Sarayu Foundation Trust

ಗುರು ಮಾತೆಯ ಸ್ತುತಿ

- ಭಕ್ತಿಶ್ರೀ ಎಂ. ಪಾಪಡೆ
ಕೊಳಾರ(ಕೆ) ತಾ. ಜಿ. ಬೀದರ್



ಅಕ್ಕನ ಅವತಾರಿಯೇ ಆಗಿ ನೀವು ಮಾತಾಜಿ
ದೇವನ ಕರುಣೆ ಧರಿಸಿಕೊಂಡು ಇಳೆಗೆ ಬಂದು ಮಾತಾಜಿ
ಶರಣ ನಾಡಿನಲ್ಲಿ ಮರೆವು ವ್ಯಾಪಿಸುತಿರಲು ಮಾತಾಜಿ
ತತ್ವ ಜ್ಞಾನ ವಿರದ ಜನತೆ ಬಳಲುತಿರಲು ಮಾತಾಜಿ
ಜ್ಞಾನಸುಧೆಯ ಎರೆದು ಜಗವ ರಕ್ಷಿಸಿದಿರಿ ಮಾತಾಜಿ
ಕರುಣ ಹೃದಯ ತ್ಯಾಗಮಯಿ ಆದಿರಿ ನೀವು ಮಾತಾಜಿ
ಜನರ ಬದುಕಿಗೊಂದು ತಿರುವು ಕೊಡುತಿರಲು ಮಾತಾಜಿ
ಧರ್ಮಕ್ರಾಂತಿ ಧೀರಯೋಗಿ ಆದಿರಿ ನೀವು ಮಾತಾಜಿ
ಭಕ್ತಿ ಕ್ರಾಂತಿಯಿಂದ ಧರ್ಮ ಬೆಳಕು ತೋರಿದ ಮಾತಾಜಿ
ಬಸವಾದಿ ಪ್ರಮಥರ ತತ್ವ ಬೀಜವಾದಿರಿ ಮಾತಾಜಿ

ಚಿನ್ಮೂಲಾದ್ರಿ ಚಿತ್ಕಳೆ ಆಗಿ ನೀವು ಮಾತಾಜಿ
ವೀರ ಮದಕರಿ ಆಳಿದ ಸ್ಥಾನದಿಂದ ಮಾತಾಜಿ
ಚಿತ್ರದುರ್ಗ ಎಂಬ ಪುಣ್ಯಭೂಮಿಯಲ್ಲಿ ಮಾತಾಜಿ
ಶರಣ ಬಸಪ್ಪನವರ ಅಕ್ಕರೆಯ ಶಿಶುವಾಗಿ ಮಾತಾಜಿ
ತಾಯಿ ಗಂಗಮ್ಮನವರ ಮುದ್ದಿನ ಮಗಳಾದಿರಿ ಮಾತಾಜಿ
1946ರಲ್ಲಿ ಜನಿಸಿ ನೀವು ಬಂದಿರಿ ಮಾತಾಜಿ
ಮೂಲ ನಾಮ ರತ್ನ ಎಂದು ಕರೆಸಿಕೊಂಡು ಮಾತಾಜಿ
ವಿಜ್ಞಾನ ಸ್ನಾತಕ್ಕೋತ್ತರ ಪದವೀಧರೆ ಆದಿರಿ ಮಾತಾಜಿ
ಅರಿವಿನಿಂದ ಬೆರೆದ ಧೀರ ನಿಲುವ ತಳೆದಿರಿ ಮಾತಾಜಿ
ಭಕ್ತಿ ವಿರಕ್ತಿ ಸಂಗಮವಾಗಿ ಶೋಭಿಸುತ್ತಿದ್ದೀರಿ ಮಾತಾಜಿ

ಗಾಂಪನಂತೆ ಮೂಢತನದ ಬಲೆಗೆ ಸಿಗದೆ ಮಾತಾಜಿ
ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠವೆಂದಿರಿ ಮಾತಾಜಿ
ರತ್ನದಿಂದ ಧರ್ಮರತ್ನವಾಗಿದಿರಿ ನೀವು ಮಾತಾಜಿ
ಶುದ್ಧ ಭಕ್ತಿಯಿಂದ ಬೇರೆ ಮುಕ್ತಿ ಇಲ್ಲವೆಂದಿರಿ ಮಾತಾಜಿ
ಸ್ತುತ್ಯ ಮಾರ್ಗ ಹಿಡಿದು ಶರಣಜ್ಯೋತಿಯಾಗಿ ಮಾತಾಜಿ
ಹೆತ್ತ ತಾಯಿ ತಂದೆಯರನು ತೊರೆದು ಬಂದಿರಿ ಮಾತಾಜಿ
ಜಗ ಬೆಳಗುವ ಚೂಡಾಮಣಿ ಆಗಿ ನೀವು ಮಾತಾಜಿ
ಗುರು ಲಿಂಗಾನಂದರಿಂದ ದೀಕ್ಷೆ ಪಡೆದು ಮಾತಾಜಿ

ರತ್ನನಾಮದಿಂದ ಮಾತೆ ಮಹಾದೇವಿಯಾದಿರಿ ಮಾತಾಜಿ
ಬಸವ ತಂದೆ ಅನುಗ್ರಹ ಪಡೆದುಕೊಂಡು ಮಾತಾಜಿ
ವ್ಯಕ್ತಿಯಿಂದ ಧರ್ಮಶಕ್ತಿ ಆದಿರಿ ನೀವು ಮಾತಾಜಿ
ಬಸವ ತತ್ವ ಪ್ರಚಾರದ ಮಣಿಹ ಹೊತ್ತ ಮಾತಾಜಿ
ಆಧ್ಯಾತ್ಮದ ಮೇರು ಪರ್ವತವಾದಿರಿ ಗುರು ಮಾತಾಜಿ
ಕ್ರಾಂತಿಕಾರಿ ಧರ್ಮ ಬೋಧಕರಾಗಿದಿರಿ ಮಾತಾಜಿ
ಸ್ತ್ರೀ ಸಮಾನತೆಯ ಹರಿಕಾರಿಣಿ ತಾವು ಮಾತಾಜಿ
1970ರಂದು ಧಾರವಾಡದಲ್ಲಿ ಗುರುವಾದಿರಿ ನೀವು ಮಾತಾಜಿ
ಮಹಿಳಾ ಜಗದ್ಗುರು ಪೀಠ ಸ್ಥಾಪಿಸಿದಿರಿ ಮಾತಾಜಿ
ಪ್ರಥಮ ಮಹಿಳಾ ಜಗದ್ಗುರುವಾಗಿ ಕರೆಸಿಕೊಂಡು ಮಾತಾಜಿ
ಪೀಠದ ಗುರಿ ವಿಶ್ವಶಾಂತಿ ಎಂದು ಸಾರಿದ ಮಾತಾಜಿ
ಮಾನವೀಯ ಪ್ರೇಮ ತೋರ್ದ ಶಿವಯೋಗಿಣಿ ಮಾತಾಜಿ

ಶರಣ ಬಳಗವನ್ನು ಒಂದೆಡೆ ಸೇರಿಸಿದಿರಿ ಮಾತಾಜಿ
1988 ರಂದು ಶರಣ ಮೇಳ ಪ್ರಾರಂಭಿಸಿದಿರಿ ಮಾತಾಜಿ
ಎಲ್ಲಾ ಬಳಗ ಒಂದೆಡೆ ಸೇರುವಂತೆ ಮಾಡಿದಿರಿ ಮಾತಾಜಿ
ಸಂಗಮ ಧರ್ಮಕ್ಷೇತ್ರ ಎಂದು ಸಾರಿದಿರಿ ಮಾತಾಜಿ
ಸಾಮೂಹಿಕ ಪ್ರಾರ್ಥನೆ ಮೂಡಿಸಿದಿರಿ ತಾವು ಮಾತಾಜಿ
ಶರಣರನ್ನು ಧನ್ಯರಾಗುವಂತೆ ಮಾಡಿದ ಮಾತಾಜಿ
1992ರಲ್ಲಿ ಪೀಠ ಸ್ಥಾಪಿಸಿದ ಮಾತಾಜಿ
ಗುರುಲಿಂಗಾನಂದರನ್ನು ಪೀಠಾಧಿಕಾರಿ ಮಾಡಿದ ಮಾತಾಜಿ
ಮಹಿಳೆಯರ ಆಶಾಕಿರಣವಾಗಿ ಮೆರೆದ ಮಾತಾಜಿ
ರಾಷ್ಟ್ರೀಯ ಬಸವ ದಳ ಸಂಘಟಿಸಿದಿರಿ ಮಾತಾಜಿ

ಬಸವ ಧರ್ಮ ಪೀಠದ ಎರಡನೇ ಪೀಠಾಧಿಕಾರಿ ಮಾತಾಜಿ
ಗಣಲಿಂಗ ದರ್ಶನ ಮಾಡಿಸಿದ ಗುರು ಮಾತಾಜಿ
ಬಸವ ತತ್ವ ವಿಶ್ವದಾದ್ಯಂತ ಪಸರಿಸಿದಿರಿ ಮಾತಾಜಿ
ಬಸವ ಧರ್ಮ ಸಮ್ಮೇಳನಗಳನ್ನು ಮಾಡಿದ ಮಾತಾಜಿ
ಅಮೆರಿಕಾ, ಇಂಗ್ಲೆಂಡ್, ಕೆನಡಾದಲ್ಲಿ ಪ್ರವಚನ ಗೈದಿರಿ ಮಾತಾಜಿ
ಬಸವನುಸಿರು ಪಸರಿಸುತ್ತಾ ಮರ್ತ್ಯದ ಬೆಳಕಾಗಿದಿರಿ ಮಾತಾಜಿ
ವಿಶ್ವಕಲ್ಯಾಣ ಮಿಷನ್ ಸಂಸ್ಥೆ ಸ್ಥಾಪಿಸಿದ ಮಾತಾಜಿ
ಮನೆ ಮನಗಳಿಗೆ ಶರಣ ಸಾಹಿತ್ಯ ಮುಟ್ಟುವಂತೆ ಮಾಡಿದಿರಿ ಮಾತಾಜಿ
ಕಲ್ಯಾಣ ಕಿರಣ ಮಾಸ ಪತ್ರಿಕೆ ಹೊರ ತಂದ ಮಾತಾಜಿ
ಜನರ ಮತಿಯ ಅರಿವನ್ನು ಇಮ್ಮಡಿಸಿದ ಮಾತಾಜಿ

Digitalized by e-Sahithya Documentation Forum
Sponsored by Sarayu Foundation Trust

ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ ನಿರ್ಮಿಸಿ ಮಾತಾಜಿ
ಶ್ರೇಷ್ಠ ಕೃತಿ ತರಂಗಿಣಿಯ ಕರ್ತೃ ಮಾತಾಜಿ
ಹೆಪ್ಪಿಟ್ಟ ಹಾಲು ಕಾದಂಬರಿ ಕರ್ತೃ ಮಾತಾಜಿ
ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕೃತೆ ಮಾತಾಜಿ
ಸಚ್ಚಿದಾನಂದನ ಶುಭ ಜ್ಯೋತಿ ಹೊತ್ತಿಸಿದ ಮಾತಾಜಿ
ಜಾತಿ ಭೇದ ಎನ್ನದೆ ಇಂಬಿಟ್ಟುಕೊಂಡು ಮಾತಾಜಿ
ಮರೆವನು ಹರಿಸಿ ಅರಿವಿನ ವಾರಿದಿ ಆಗಿ ಮಾತಾಜಿ
ಪರಮ ಪುಣ್ಯ ಗುರುವಾದ ದಿವ್ಯಯೋಗಿ ಮಾತಾಜಿ
ಮಾನವೀಯ ಪ್ರೇಮ ತೋರ್ದ ಶಿವಯೋಗಿಣಿ ಮಾತಾಜಿ ॥ 70 ॥

2002ರಲ್ಲಿ ಶುಭ ವರುಷದಲ್ಲಿ ಮಾತಾಜಿ
ಬಸವ ತಂದೆ ಕರ್ಮಭೂಮಿ ಕಲ್ಯಾಣದಲ್ಲಿ ಮಾತಾಜಿ
ಕಲ್ಯಾಣ ಪರ್ವ ಮಾಡಿ ಶರಣರು ಬರುತಿರಲು ಮಾತಾಜಿ
ಅಲ್ಲಮಪ್ರಭು ಶೂನ್ಯ ಪೀಠ ಸ್ಥಾಪಿಸಿದಿರಿ ಮಾತಾಜಿ
ಎಲ್ಲಾ ಶರಣರಿಗೆ ಶರಣು ಎಂದು ಹೇಳಿದಿರಿ ಮಾತಾಜಿ
ನರನ ಜನ್ಮದಿಂದ ಶರಣ ಜನ್ಮ ಹೊಂದಿ ಮಾತಾಜಿ
108 ಅಡಿ ಗುರು ಬಸವ ಮೂರ್ತಿ ಕರ್ತೃ ಮಾತಾಜಿ
2012 ರಲ್ಲಿ ಲೋಕಾರ್ಪಣೆ ಮಾಡಿದಿರಿ ಮಾತಾಜಿ
ಶರಣರ ಗವಿಗಳನ್ನು ನಿರ್ಮಿಸಿದವರು ಮಾತಾಜಿ
ಬಸವ ತಂದೆ ಕೀರ್ತಿ ಜಗದಿ ಬಿತ್ತರಿಸಿದಿರಿ ಮಾತಾಜಿ ॥ 80 ॥

ವೀರಶೈವ ಲಿಂಗಾಯತ ಬೇರೆ ಎಂದು ಮಾತಾಜಿ
ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂದು ಸಾರಿ ಮಾತಾಜಿ
ಲಿಂಗದೇವನ ಮಹಿಮೆಯನ್ನು ಜಗಕೆ ಸಾರಿ ಮಾತಾಜಿ
ನಿಸ್ವಾರ್ಥದಿಂದ ದುಡಿದು ನೀವು ಮಾದರಿಯಾಗಿ ಮಾತಾಜಿ
ಮಹಾಮನೆ ಕಟ್ಟಿ ಮಹಾತಾಯಿ ಆಗಿ ಮಾತಾಜಿ
ಕರುಣ ಹೃದಯ ತ್ಯಾಗಮಯ ಪ್ರೇಮಮಯಿ ಮಾತಾಜಿ
ಧರ್ಮಕ್ರಾಂತಿ ಧೀರಯೋಗಿ ಆಗಿ ಗುರು ಮಾತಾಜಿ
ವೈರಾಗ್ಯ ಮೂರ್ತಿ ಆಗಿ ಧರ್ಮ ಕಹಳೆ ಊದಿ ಮಾತಾಜಿ
ಪ್ರವಚನದ ಪಟುವಾಗಿ ಜನಮನ ತಣಿಸಿದ ಮಾತಾಜಿ
ಅಮೃತವಾಣಿಯಿಂದ ಜನರ ಮನ ಗೆಲಿದ ಮಾತಾಜಿ ॥ 90 ॥

ಸಾಹಿತ್ಯ ಸೃಷ್ಟಿಯಲ್ಲಿ ಪಾಂಡಿತ್ಯ ಹೊಂದಿ ಮಾತಾಜಿ

ಭಕ್ತಿಗೀತೆ ನಾಡಗೀತೆ ರಚಿಸಿ ನೀವು ಮಾತಾಜಿ
ಲಿಂಗದೀಕ್ಷೆ ನೀಡಿ ಜನಕೆ ಧರ್ಮ ತೋರಿ ಮಾತಾಜಿ
ಶಕ್ತಿ ಭಕ್ತಿ ಸಂಗಮವಾಗಿ ಬೆಳಗ ತೋರಿ ಮಾತಾಜಿ
ಧರ್ಮಗಂಗೆ ಆಗಿ ಜನ ಮನ ತಣಿಯಲು ಮಾತಾಜಿ
ಬಸವಾದಿ ಶರಣರ ಸಂದೇಶ ಸಾರಿ ಮಾತಾಜಿ
ನಿರ್ಭೀತ ನಿಲುವು ತತ್ವ ನಿಷ್ಠೆ ಸತ್ಯ ಪ್ರಿಯತೆ ಮಾತಾಜಿ
ಗುರು ಲಿಂಗಾನಂದರ ಅಧ್ಯಾತ್ಮ ತಾಯಿ ಮಾತಾಜಿ
ಗುರು ಬಸವ ಕರುಣೆಯ ಕಂದಲಾಗಿ ಮಾತಾಜಿ
ಶರಣ ಬಳಗ ಮಾತೆಯಾಗಿ ಕರುಣೆ ತೋರಿ ಮಾತಾಜಿ ॥ 100 ॥

ಮಹಾಗುರು ಜಗದ್ಗುರು ಶ್ರೀ ಗುರುವೆ ಮಾತಾಜಿ
ಸಚ್ಚಿದಾನಂದನ ಪ್ರಿಯ ಸತಿ ನೀವು ಮಾತಾಜಿ
ಕರುಣೆಯಿಂದ ದೃಷ್ಟಿ ಹರಿಸಿ ಪಾವನಗೊಳಿಸಿ ಮಾತಾಜಿ
ನಿಮ್ಮ ಪರುಷ ಹಸ್ತವೆನ್ನ ಮಸ್ತಕದಿ ಮಾತಾಜಿ
ಹರುಷದಿಂದ ಹಾಡಿ ಪಾಡಿ ನಲಿದಾಡಿ ಮಾತಾಜಿ
ಭಕ್ತಿಶ್ರೀ ದೀಕ್ಷಾ ಗುರು ಆದಿರಿ ನೀವು ಮಾತಾಜಿ
ಪಾಹಿಮಾಂ ಪಾಹಿಮಾಂ ಪಾಹಿಮಾಂ ಮಾತಾಜಿ
ರಕ್ಷಮಾಂ ರಕ್ಷಮಾಂ ರಕ್ಷಮಾಂ ಮಾತಾಜಿ. ॥ 108 ॥

ಕೂಡಲ ಸಂಗಮದಲ್ಲಿ ಬಸವ ಭಾರತಿ ವಸತಿ ಸಹಿತ (ರೆಸಿಡೆನ್ಷಿಯಲ್) ಪ್ರೌಢಶಾಲೆ ಹಾಗೂ ಕಾಲೇಜು

ಧರ್ಮಕ್ಷೇತ್ರ ಕೂಡಲ ಸಂಗಮದ ಮಹಾಮನೆ ಮಹಾಮಠದ ಆವರಣದಲ್ಲಿ ಬಸವ ಭಾರತಿ ಪ್ರೌಢಶಾಲೆ ಹಾಗೂ ಕಾಲೇಜಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿ ದೊರೆತಿದ್ದು ಪ್ರವೇಶ ಪ್ರಾರಂಭವಾಗಿದೆ. ಸ್ಥಳೀಯವಾಗಿ ಹಗಲು ಬಂದು ಹೋಗುವವರಿಗೆ ಮತ್ತು ವಸತಿ-ಊಟದ ವ್ಯವಸ್ಥೆಯೊಡನೆ ಇದ್ದು ಓದುವ ಉಭಯತರಿಗೂ ಅವಕಾಶವಿದೆ. ವಿವರಗಳಿಗಾಗಿ ಬೇಗನೆ ಸಂಪರ್ಕಿಸಿರಿ.

ಈಗಾಗಲೇ 1ರಿಂದ 10ನೆಯ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿದ್ದು ಶಾಲೆಯು ಒಳ್ಳೆಯ ಹೆಸರನ್ನು ಗಳಿಸಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಇದೀಗ 2017ನೆಯ ಪ್ರವೇಶ ಪ್ರಾರಂಭವಾಗಿದೆ. ಅಲ್ಲವೆ ಪಿಯು ವಿಜ್ಞಾನ ಕಾಲೇಜ್ ಕೂಡ ಆರಂಭಿಸಲಾಗಿದೆ. ಪ್ರಶಾಂತವಾದ ವಾತಾವರಣ, ಅಚ್ಚುಕಟ್ಟಾದ ಊಟದ ವ್ಯವಸ್ಥೆ, ಉತ್ತಮ ಶಿಕ್ಷಕರಿಂದ ಬೋಧನೆ, ಧಾರ್ಮಿಕ ಸಂಸ್ಕಾರ, ಬಸವ ಭಾರತಿ ರೆಸಿಡೆನ್ಷಿಯಲ್ ಶಾಲೆಯಲ್ಲಿ ಲಭ್ಯವಾಗಲಿದೆ.

ವಿವರಗಳಿಗಾಗಿ ಸಂಪರ್ಕಿಸುವ ವಿಳಾಸ

ಮೊ: 9483748266 ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು

Digitalized by e-Sahithya Documentation Forum
Sponsored by Sarayu Foundation Trust

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ

ಅನಾಥಾಲಯಗಳಿಗೆ ಪ್ರವೇಶಾವಕಾಶ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
   9845399698 / 9448386717
   ಬಾಲಕರಿಗೆ 7ನೆಯ ತರಗತಿಯವರೆಗೆ ಮಾತ್ರ,
   ಬಾಲಕಿಯರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ.
2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಅನಾಥಾಲಯ
   ಸಂಪರ್ಕಿಸಬೇಕಾದವರು : ಶರಣೆ. ಸುಗುಣ
   ಬಾಲಕರಿಗೆ ಒಂದರಿಂದ ಏಳು
   ಬಾಲಕಿಯರಿಗೆ ಒಂದರಿಂದ ಹತ್ತನೆ ತರಗತಿಯವರೆಗೆ.
3. ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
   9483748266
   ಬಾಲಕರಿಗೆ ಮಾತ್ರ ; ಒಂದರಿಂದ ಹತ್ತನೆ ತರಗತಿಯವರೆಗೆ.
4. ಬಸವ ಕಲ್ಯಾಣದಲ್ಲಿ ಅಕ್ಕನಾಗಲಾಂಬಿಕಾ ಅನಾಥಾಲಯ
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು
   9480497346
   ಬಾಲಕ-ಬಾಲಕಿಯರಿಬ್ಬರಿಗೂ ಒಂದನೆಯ ತರಗತಿಯಿಂದ 10ನೆಯ ತರಗತಿಯವರೆಗೆ ಪ್ರವೇಶಾವಕಾಶ.
5. ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
   5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ, ಬಾಲಕಿಯರಿಗೆ ಮಾತ್ರ
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : 9480497346
6. ಕಲ್ಯಾಣಮ್ಮ (ಅನಾಥಾಲಯ) ನಿರ್ಗತಿಕ ಮಕ್ಕಳ ಕುಟೀರ. ಬೀದರ ಬಸವ ಮಂಟಪ.
   ಕೇವಲ ಬಾಲಕಿಯರು. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ,
   ಪೂಜ್ಯ ಶ್ರೀ ಮಾತೆ ಸತ್ಯಾದೇವಿ :
7. ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬೀದರ ಬಸವ ಮಂಟಪದಲ್ಲಿ 5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ.
8. ಅಕ್ಕನಾಗಲಾಂಬಿಕಾ ನಿರ್ಗತಿಕ ಮಕ್ಕಳ ಕುಟೀರ
   ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ
   ಬಸವ ಕಲ್ಯಾಣ, ಬೀದರ್ ಜಿಲ್ಲೆ
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : 9480497346







ಬಸವ ಜಯಂತಿಯ ಸಿಹಿ ಕ್ಷಣಗಳು

Digitalized by e-Sahithya Documentation Forum
Sponsored by Sarayu Foundation Trust



ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಬಸವ ಧರ್ಮ ಪೀಠ (ರಿ)ದ



ಬಸವ ಭಾರತಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಕೂಡಲಸಂಗಮ

ತಾ॥ ಹುನಗುಂದ ಜಿ॥ ಬಾಗಲಕೋಟ

ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆ



ಪ್ರವೇಶ ಪ್ರಾರಂಭ

ಪ್ರೌಢಶಾಲಾ ಮಕ್ಕಳಿಗೆ ಪ್ರತ್ಯೇಕ ವಸತಿ ಸೌಲಭ್ಯ ಇದೆ

ಎಲ್.ಕೆ.ಜಿ., ಯುಕೆ.ಜಿ., 1 ರಿಂದ 4 ಹಾಗೂ 9, 10ನೇ ತರಗತಿಗಳಿಗೆ

ನಮ್ಮ ಶಾಲೆಯಲ್ಲಿ :

- ವರ್ಷದುದ್ದಕ್ಕೂ ಪಠ್ಯಪೂರಕ ಸಾಂಸ್ಕೃತಿಕ ಚಟುವಟಿಕೆಗಳು.
- ಎಲ್.ಸಿ.ಡಿ. ಮತ್ತು ಇಂಟರ್‌ನೆಟ್ ಕಂಪ್ಯೂಟರ್‌ಗಳ ಪರಿಣಾಮಕಾರಿ ಬಳಕೆ.
- ಅನುಭವಿಕ ಶಿಕ್ಷಕ ವೃಂದ. ನಿಷ್ಠೆಯಿಂದ ದುಡಿಯುವ ಶಿಕ್ಷಕರು.
- ವರ್ಗ ಕೋಣೆಯಲ್ಲಿ "ಡಿಜಿಟಲ್ ತಂತ್ರಜ್ಞಾನ" ಅಳವಡಿಕೆ.
- ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ
- ವೈಫೈ ಸೌಲಭ್ಯ ಹೊಂದಿದ ಶಾಲೆ
- ಇಲ್ಲಿ ಮುಕ್ತಭಾವನೆಯಿಂದ ಕಲಿಯುವ ವಾತಾವರಣವಿದೆ.
- ವಿಶಾಲ ಆಟದ ಮೈದಾನ ಕ್ರಿಯಾತ್ಮಕ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ
- ವಿದ್ಯಾರ್ಥಿಗಳಲ್ಲಿ ಧರವಸೆ ಮೂಡಿಸಲು ವಿಶೇಷ ಪರೀಕ್ಷಾ ತರಬೇತಿ; ವೈಯಕ್ತಿ ಕಾಳಜಿ
- 9ನೇ & 10ನೇ ವರ್ಗದ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾಳಜಿವಹಿಸಿ ಹೆಚ್ಚಿನ ವರ್ಗಗಳನ್ನು ಆಯೋಜಿಸಲಾಗುತ್ತಿದೆ
- ಬೋಧನೆಯಲ್ಲಿ ಆಧುನೀಕರಣ
- ಕಿಂಡರ್ ಗಾರ್ಡನ್ ಶಿಕ್ಷಣ ವ್ಯವಸ್ಥೆ
- ತಿಂಗಳಿಗೊಮ್ಮೆ ಕಿರು ಪರೀಕ್ಷೆ

2016-17ನೇ ಸಾಲಿನ ಎಸ್.ಎಸ್.ಎಲ್.ಸಿ.ಯ ಒಟ್ಟು ಫಲಿತಾಂಶ 86%

ಬಸ್ ಸೌಲಭ್ಯ :



ಮಾರ್ಗ 1: ದೊಮ್ಮನಾಳ, ಸುತಗುಂಡರ, ಮ್ಯಾಗೇರಿ, ಹಂದ್ರಾಳ, ಕಟಗೂರ, ತುರಡಗಿ, ವಳಕಲದಿನ್ನಿ, ಬಿಸಲದಿನ್ನಿ
ಮಾರ್ಗ 2: ಗಂಜೀಹಾಳ, ಹೂವನೂರ, ನಂದನೂರ, ವರಗೋಡದಿನ್ನಿ
ಮಾರ್ಗ 3: ಕೂಡಲಸಂಗಮ

2016-17ನೇ ಸಾಲಿನ ಎಸ್.ಎಸ್.ಎಲ್.ಸಿ. ಪ್ರತಿಭಾ ಕಿರಣಗಳು



ಕರಣ ಚವ್ಹಾಣ 597 (96%) ಕನ್ನಡ 125/125, ಹಿಂದಿ 100/99 ಇಂಗ್ಲೀಷ್ 100/95, ಸಮಾಜ 100/92
ಈರಣ್ಣ ಕಳ್ಳಿಮಟ್ಟಿ 557 (90%)
ಅನಿಲ ಚವ್ಹಾಣ 525 (84%) ಹಿಂದಿ 100/94
ಆನಂದ ಚಂದ್ರಶೇಖರ 504 (81%)

ವಿಷಯವಾರು ಶೇಕಡಾ ಫಲಿತಾಂಶ	
ಕನ್ನಡ	- 92%
ಇಂಗ್ಲೀಷ	- 95%
ಹಿಂದಿ	- 89%
ಗಣಿತ	- 95%
ವಿಜ್ಞಾನ	- 97%
ಸ.ವಿಜ್ಞಾನ	- 89%

Contact us 9341819847, 9480226372, 8867612488, 8867612162, 8050793400, 8496997323, 9743532637, 08351-268224

May Sanchike Published on 18-05-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/2015-17, wpp-17
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th, 20th of every month, Pages 32+4

Digitalized by e-Sahithya Documentation Forum
Sponsored by Sarayu Foundation Trust